ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 130

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಬುಧವಾರ: 29-04-2026

# ಮೋದಿ-ದೀದಿ ಕೊನೆ ಫೈಟ್ : ಇಂದು ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಮತದಾನ

**ಕೋಲ್ಕತ್ತಾ, ಏ. 28–** ಭಾರತೀಯ ಜನತಾ ಪಕ್ಷ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಯುದ್ಧ ಎಂದೇ ಪರಿಗಣಿಸಲಾಗಿರುವ ಪಶ್ಚಿಮ ಬಂಗಾಳದಲ್ಲಿ ಇಂದು ಎರಡನೇ ಹಂತದ ಚುನಾವಣೆ ನಡೆಯಲಿದೆ.

ಬಂಗಾಳದ ರಾಜಕೀಯ ಹೃದಯಭಾಗದಲ್ಲಿ 142 ಶಾಸಕರನ್ನು ಆಯ್ಕೆ ಮಾಡುವುದಲ್ಲದೆ, ಟಿಎಂಸಿ ಇನ್ನೂ ತನ್ನ ದಕ್ಷಿಣ ಕೋಟೆಯನ್ನು ಹೊಂದಿದೆಯೇ ಅಥವಾ ಬಿಜೆಪಿ ಈ ಭಾಗದಲ್ಲೂ ಅಸ್ತಿತ್ವ ಉಳಿಸಿಕೊಳ್ಳಲಿದೆಯೇ ಎನ್ನುವುದು ನಾಳೆ ನಿರ್ಧಾರವಾಗಲಿದೆ.

ಏ. 23 ರಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಉತ್ತರ ಬಂಗಾಳ ಮತ್ತು ಪಕ್ಕದ ಜಿಲ್ಲೆಗಳಲ್ಲಿ ಬಿಜೆಪಿ ತನ್ನ ಸಾಂಪ್ರದಾಯಿಕ ಪ್ರಾಬಲ್ಯವನ್ನು ಉಳಿಸಿಕೊಳ್ಳಬಹುದೇ ಎಂದು ಪರೀಕ್ಷಿಸಿದ್ದರೆ, ಅಂತಿಮ ಸುತ್ತಿನ ಚುನಾವಣೆಯು ಟಿಎಂಸಿಯ ತವರು ಕ್ಷೇತ್ರವಾದ ಕೋಲ್ಕತ್ತಾ, ಹೌರಾ, ಉತ್ತರ ಮತ್ತು ದಕ್ಷಿಣ 24 ಪರಗಣಗಳು, ನಾಡಿಯಾ, ಹೂಗ್ಲಿ ಮತ್ತು ಪುರ್ಬಾ ಬರ್ಧಮಾನ್‌ಗೆ ನಿರ್ಣಾಯಕವಾಗಿ ಹೋರಾಟವನ್ನು ಬದಲಾಯಿಸುತ್ತದೆ.

ಈಗ ಚುನಾವಣೆಗೆ ಹೋಗುವ 142 ಸ್ಥಾನಗಳಲ್ಲಿ, ಟಿಎಂಸಿ 2021 ರಲ್ಲಿ 123 ಸ್ಥಾನಗಳನ್ನು ಗೆದ್ದಿತ್ತು, ಬಿಜೆಪಿ ಕೇವಲ 18 ಸ್ಥಾನಗಳನ್ನು ಮತ್ತು ಐಎಸ್‌ಎಫ್ ಒಂದು ಸ್ಥಾನವನ್ನು ಗೆದ್ದಿತ್ತು.ಐದು



ವರ್ಷಗಳ ಹಿಂದೆ ಬಿಜೆಪಿಯ ಆಕ್ರಮಣಕಾರಿ ಪ್ರಯತ್ನದ ಹೊರತಾಗಿಯೂ, ಮಮತಾ ಬ್ಯಾನರ್ಜಿ ಅವರ ಪಕ್ಷವು ದಕ್ಷಿಣ ಬಂಗಾಳವನ್ನು ಸುಲಭವಾಗಿ ಗೆದ್ದು ರಾಜ್ಯದ ನಿಯಂತ್ರಣವನ್ನು ಉಳಿಸಿಕೊಂಡಿದ್ದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ರಾಜಕೀಯ ಆಶ್ರಯ ತಾಣ ಮತ್ತು ಬಿಜೆಪಿ ಆಯ್ಕೆ ಮಾಡಿದ ಮಾನಸಿಕ ಯುದ್ಧಭೂಮಿಯಾಗಿರುವ ಭವಾನಿಪುರದಲ್ಲಿ ಅವರು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿಯನ್ನು ಎದುರಿಸುತ್ತಾರೆ, ಇದನ್ನು ಇಲ್ಲಿ ಅನೇಕರು ಎಲ್ಲಾ ಚುನಾವಣಾ ಸ್ಪರ್ಧೆಗಳ ತಾಯಿ ಎಂದು ಕರೆಯುತ್ತಾರೆ.

ಬಿಜೆಪಿಗೆ, ಎರಡನೇ ಹಂತವು ಕೇವಲ ಅಂತಿಮ ಸುತ್ತಾಗಿಲ್ಲ. ಇದು ಆಡಳಿತ ವಿರೋಧಿ ಅಲೆ, ಭ್ರಷ್ಟಾಚಾರ ಆರೋಪಗಳು ಮತ್ತು ಪೌರತ್ವ ರಾಜಕೀಯವು ಆಡಳಿತ ಪಕ್ಷದ ಬಲಿಷ್ಠ ಗೋಡೆಯನ್ನು ಮುರಿಯಬಹುದೇ ಎಂಬುದರ ನಿಜವಾದ ಪರೀಕ್ಷೆಯಾಗಿದೆ.

ಟಿಎಂಸಿಗೆ, ಈ ಪಟ್ಟಿಯನ್ನು ಹಿಡಿದಿಟ್ಟುಕೊಳ್ಳುವುದು ಎಂದರೆ ನಾಲ್ಕನೇ ನೇರ ಅವಧಿಗೆ ಹಾದಿ ದೃಢವಾಗಿ ತೆರೆದಿರುತ್ತದೆ.ಇದು ಯಾವಾಗಲೂ ನಮ್ಮ ಬಲಿಷ್ಠ ವಲಯವಾಗಿದೆ. 2021 ರಲ್ಲಿ ಮತ್ತು 2024 ರ ಲೋಕಸಭಾ ಚುನಾವಣೆಗಳಲ್ಲಿಯೂ ಸಹ, ಇಲ್ಲಿನ ಜನರು ನಮ್ಮೊಂದಿಗೆ ನಿಂತರು. ನಾವು ಈ ಪಟ್ಟಿಯನ್ನು ಉಳಿಸಿಕೊಂಡರೆ, ಬಂಗಾಳವು ಮಮತಾ ಬ್ಯಾನರ್ಜಿಯೊಂದಿಗೆ ಇರುತ್ತದೆ ಎಂದು ಟಿಎಂಸಿಯ ಹಿರಿಯ ನಾಯಕಿಯೊಬ್ಬರು ಹೇಳಿದರು.

ಉತ್ತರ 24 ಪರಗಣಗಳು ಮಾತ್ರ 33 ಸ್ಥಾನಗಳನ್ನು ಹೊಂದಿವೆ, ದಕ್ಷಿಣ 24 ಪರಗಣಗಳು 31, ಹೌರಾ 16, ನಾಡಿಯಾ 17, ಹೂಗ್ಲಿ 18, ಪುರ್ಬಾ ಬರ್ಧಮಾನ್ 16, ಆದರೆ ಕೋಲ್ಕತ್ತಾದ 11 ಸ್ಥಾನಗಳು ಸಾಂಕೇತಿಕವಾಗಿ ಅತ್ಯಂತ ಪ್ರತಿಷ್ಠಿತವಾಗಿವೆ.ಉತ್ತರ ಮತ್ತು ದಕ್ಷಿಣ 24 ಪರಗಣಗಳು ಆ ಸ್ಪರ್ಧೆಯ ಕೇಂದ್ರಬಿಂದುವಾಗಿ ಉಳಿದಿವೆ ಇದನ್ನು ರಾಜ್ಯ ರಾಜಕಾರಣಿಗಳು ಸಾಮಾನ್ಯವಾಗಿ ಬಂಗಾಳದ ಚುನಾವಣಾ ನಕ್ಷೆಯ ಉತ್ತರ ಪ್ರದೇಶ ಎಂದು ಕರೆಯುತ್ತಾರೆ, ಇವುಗಳ ಚುನಾವಣಾ ತೂಕವು ನಬನ್ನಾದಲ್ಲಿ ಅಧಿಕಾರವನ್ನು ಮಾಡಬಹುದು ಅಥವಾ ರದ್ದುಗೊಳಿಸಬಹುದು ಎಂಬ ಅವಳಿ ಜಿಲ್ಲೆಗಳಾಗಿವೆ. 2ನೇಪುಟಕ್ಕೆ

# ದ್ವಿತೀಯ ಪಿಯುಸಿ ಪರೀಕ್ಷೆ-2 ಸುಸೂತ್ರವಾಗಿ ನಡೆಸಿ- ಅಪರ ಜಿಲ್ಲಾಧಿಕಾರಿ ಶಿವಾನಂದ



ಧೈರ್ಯದ ದಾರಿ

**ರಾಯಚೂರು:** ದ್ವಿತೀಯ ಪಿಯುಸಿ ಪರೀಕ್ಷೆ-2. ರಾಯಚೂರು ಜಿಲ್ಲೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಸುಸೂತ್ರವಾಗಿ ನಡೆಸಿ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಹೇಳಿದರು

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕರೆದ ದ್ವಿತೀಯ ಪಿಯುಸಿ ಪರೀಕ್ಷೆ- 2 ರ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಏಪ್ರಿಲ್. 30 ರಿಂದ ಮೇ. 13 ರವರೆಗೆ ಜಿಲ್ಲೆಯಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ-2 ಯಾವುದೇ ಸಮಸ್ಯೆಗಳಾಗದಂತೆ ನಡೆಸಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿ ಮತ್ತು ಸಿಬ್ಬಂದಿಗಳು ತಮಗೆ ನಿಗದಿಪಡಿಸಿದ ಸಮಯಕ್ಕೆ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿರಬೇಕು. ಜಿಲ್ಲೆಯಲ್ಲಿ ಒಟ್ಟು 6 ಪರೀಕ್ಷಾ ಕೇಂದ್ರಗಳಿದ್ದು. ರಾಯಚೂರು ತಾಲ್ಲೂಕಿನಲ್ಲಿ ಎರಡು. ಲಿಂಗಸೂಗುರು ತಾಲ್ಲೂಕಿನಲ್ಲಿ ಒಂದು. ದೇವದುರ್ಗ ತಾಲ್ಲೂಕಿನಲ್ಲಿ ಒಂದು. ಸಿಂಧನೂರು ತಾಲ್ಲೂಕಿನಲ್ಲಿ ಒಂದು ಹಾಗೂ ಮಾನವಿ ತಾಲ್ಲೂಕಿನಲ್ಲಿ ಒಂದು ಸೇರಿ ಒಟ್ಟು 6 ಪರೀಕ್ಷಾ ಕೇಂದ್ರಗಳು ಜಿಲ್ಲೆಯಲ್ಲಿದ್ದು ಯಾವುದೇ ಕೇಂದ್ರಗಳಲ್ಲಿ ಸಮಸ್ಯೆಗಳಾಗದಂತೆ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳು ನೋಡಿಕೊಳ್ಳಬೇಕೆಂದರು.

ಎಸ್.ಎಸ್.ಎಲ್.ಸಿ ಯಲ್ಲಿ ಬಂದ ಉತ್ತಮ ಫಲಿತಾಂಶ ಪಿಯುಸಿ ಯಲ್ಲಿ ಬರುವಂತೆ ಎಲ್ಲರೂ ಶ್ರಮಿಸಬೇಕು. ತಮಗೆ ಏನಾದರೂ ಸಮಸ್ಯೆಗಳಾದರೆ ನಮ್ಮ ಗಮನಕ್ಕೆ ತರಬೇಕು ದ್ವಿತೀಯ ಪಿಯುಸಿ ಪರೀಕ್ಷೆ-1 ಯಶಸ್ವಿಯಾಗಿ ನಡೆಸಿದಂತೆ ದ್ವಿತೀಯ ಪಿಯುಸಿ ಪರೀಕ್ಷೆ- 2 ನ್ನು ಯಶಸ್ವಿಯಾಗಿ ನಡೆಸಬೇಕು. ಈಗಾಗಲೇ ರೂಟ್ ಆಫೀಸರ್. ಎಕ್ಸಾಮ ಚಿಫ್ ಸೇರಿದಂತೆ ಇತರರು ಪರೀಕ್ಷೆಗೆ ನಿಯೋಜಿತ ಎಲ್ಲರೂ ಉತ್ತಮವಾಗಿ ಕರ್ತವ್ಯ ನಿರ್ವಹಿಸಬೇಕೆಂದು ಹೇಳಿದರು.

ಈ ಸಭೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ. ಜಿಲ್ಲಾ ಖಜಾನಾಧಿಕಾರಿ ಸಿದ್ರಾಮೇಶ್ವರ. ಸೇರಿದಂತೆ ರೂಟ್ ಆಫೀಸರ. ಎಕ್ಸವ್ ಚೀಫ್ ಹಾಗೂ ಇತರರು ಉಪಸ್ಥಿತರಿದ್ದರು.

# ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಯೋಗಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ಮಾನ್ವಿ ವತಿಯಿಂದ ನಡೆದ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಸರಕಾರಿ ಬಾಲಕಿಯರ ಪ್ರೌಢಶಾಲಾ ಮುಖ್ಯಪಾಧ್ಯಾಯರಾದ ಸಂಜೀವ್ ಸುಧಾಕರ್ ಮಾತನಾಡಿ ಇಂತಹ ಸಂಸ್ಕಾರ ಶಿಬಿರಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನವಾಗುತ್ತದೆ ಹಾಗೂ ನಮ್ಮ ಪ್ರಾಚೀನ ಪರಂಪರೆ, ಸಂಸ್ಕಾರ, ಜ್ಞಾನ ಹೆಚ್ಚುವುದಲ್ಲದೆ ಯೋಗ ಮತ್ತು ಧ್ಯಾನದಿಂದ ಉತ್ತಮ ಆರೋಗ್ಯ ದೊರೆಯುತ್ತದೆ. ಎಂದು ತಿಳಿಸಿದರು.

ಯೋಗ ಗುರುಗಳಾದ ಅನ್ನದಾನಯ್ಯ ಮಾತನಾಡಿ ಸಂಸ್ಕಾರ ಶಿಬಿರದಲ್ಲಿ ಮಕ್ಕಳಿಗೆ ಯೋಗಾಸನ, ಭಗವದ್ಗೀತೆ, ಭಜನೆ, ಕಥೆ, ಆಟಗಳು, ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಹೆಚ್ಚಿಸುವ. ಆರೋಗ್ಯ ಪೂರ್ಣ ಜೀವನವನ್ನು ನಡೆಸಲು ಅಗತ್ಯವಿರುವ ಉತ್ತಮ



ಅಭ್ಯಾಸಗಳ ಬಗ್ಗೆ ತಿಳಿಸಿಕೊಡಲಾಗಿದು ಇವುಗಳು ಮಕ್ಕಳಲ್ಲಿ ಒಳ್ಳೆಯ ಬದಲಾವಣೆಗಳನ್ನು ತರುವಲ್ಲಿ ಸಹಕಾರಿಯಾಗಲಿವೇ ಎಂದು ತಿಳಿಸಿದರು.

10ನೇ ತರಗತಿಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ ಸುಖದೇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಸ್ಕಾರ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಅಭಿನಂದನಾ ಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಉರ್ದು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಾದ ಅಶೋಕ ಕುಮಾರ್ ಚಿಂಚೋಳಿ,ಪ್ರಕಾಶ್ ಬಾಬು, ಅರುಣ್ ಕುಮಾರ್. ಮಲ್ಲೇಶನಾಯಕ ,ವಿಜಯಕುಮಾರ್ ಸೇರಿದಂತೆ ಇನ್ನಿತರರು ಇದ್ದರು.

# ಲಿಂಗಸುಗೂರುದಲ್ಲಿ ಗ್ಯಾಸ್ ಸಮಸ್ಯೆ ತೀವ್ರ: ವೆಂಕಟೇಶ್ವರ ಗ್ಯಾಸ್ ಕಂಪನಿ ವಿರುದ್ಧ ಆಕ್ರೋಶ



ಧೈರ್ಯದ ದಾರಿ

**ಲಿಂಗಸುಗೂರು :** ತಾಲೂಕಿನಾದ್ಯಂತ ಗ್ಯಾಸ್ ಸರಬರಾಜು ಸಮಸ್ಯೆ ಗಂಭೀರ ಸ್ವರೂಪ ಪಡೆದಿದ್ದು, ವೆಂಕಟೇಶ್ವರ ಗ್ಯಾಸ್ ಕಂಪನಿಯ ವಿರುದ್ಧ ಸಾರ್ವಜನಿಕರ ಆಕ್ರೋಶ ವ್ಯಕ್ತವಾಗಿದೆ. ಮಧ್ಯಪ್ರಾಚ್ಯ ಯುದ್ಧದ ನೆಪದಲ್ಲಿ 45 ದಿನಕ್ಕೊಮ್ಮೆ ಮಾತ್ರ ಗ್ಯಾಸ್ ಬುಕ್ಕಿಂಗ್ ಮಾಡಲಾಗುತ್ತಿದ್ದು, ಸಾವಿರಾರು ಮನೆಗಳಿಗೆ ತೀವ್ರ ತೊಂದರೆ ಉಂಟಾಗಿದೆ ಎಂದು ಗ್ರಾಹಕರು ದೂರಿದ್ದಾರೆ.

ಇ-ಕೆವೈಸಿ (ಜ-ಏಜಅ) ಹೆಸರಿನಲ್ಲಿ ಅನೇಕ ಗ್ರಾಹಕರಿಗೆ ಗ್ಯಾಸ್ ಸಿಲಿಂಡರ್ ಬುಕ್ಕಿಂಗ್ ಸಾಧ್ಯವಾಗದೇ ಮತ್ತಷ್ಟು ಸಂಕಷ್ಟ ಎದುರಾಗಿದೆ. ಹಳ್ಳಿಗಳಿಂದ ಪಟ್ಟಣಕ್ಕೆ ಬರುವ ಮಹಿಳೆಯರು, ವೃದ್ಧರು ಹಾಗೂ ಅಂಗವಿಕಲರು ಸುಮಾರು 500 ಮೀಟರ್ ನಡೆದು ಗ್ಯಾಸ್ ಕಚೇರಿಗೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ಯಾಸ್ ಕಚೇರಿಗೆ ಭೇಟಿ ನೀಡುವ ಗ್ರಾಹಕರು ಬೆಳಿಗ್ಗೆಯಿಂದ ಸಂಜೆವರೆಗೆ ಕಾಯಬೇಕಾಗಿದ್ದು, ಕುಡಿಯುವ ನೀರು, ನೆರಳು, ಕುಳಿತುಕೊಳ್ಳಲು ಆಸನಗಳಂತಹ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಿಸಿಲಿನಲ್ಲಿ ಪರದಾಡುತ್ತಿದ್ದಾರೆ. ಜೊತೆಗೆ, ಸಿಬ್ಬಂದಿಗಳ ಅಸೌಜನ್ಯ ವರ್ತನೆ ಕೂಡ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಗ್ಯಾಸ್ ಕಂಪನಿಯ ಮೇಲ್ವಿಚಾರಣೆ ಮಾಡಬೇಕಾದ ಆಹಾರ ಇಲಾಖೆ, ತಹಶೀಲ್ದಾರರು ಹಾಗೂ ಸಹಾಯಕ ಆಯುಕ್ತರು ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಹೋಟೆಲ್‌ಗಳಂತಹ ವಾಣಿಜ್ಯ ಬಳಕೆಗೆ ಗ್ಯಾಸ್ ಸರಬರಾಜಿನಲ್ಲಿ ಯಾವುದೇ ತೊಂದರೆ ಇಲ್ಲದಿದ್ದರೂ, ಬಡವರ ಮನೆಗಳಿಗೆ ಮಾತ್ರ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಘಟನೆ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ವೆಂಕಟೇಶ್ವರ ಗ್ಯಾಸ್ ಕಂಪನಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಜೊತೆಗೆ, ಗ್ರಾಹಕರ ಸಮಸ್ಯೆಗಳ ತಕ್ಷಣ ಪರಿಹಾರಕ್ಕೆ ಮುಂದಾಗುವಂತೆ ಒತ್ತಾಯಿಸಿದ್ದಾರೆ.

**ಮುಖ್ಯ ಬೇಡಿಕೆಗಳು:**

***ಗ್ಯಾಸ್ ಕಚೇರಿಗೆ ಬರುವ ಗ್ರಾಹಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು**

***ನೆರಳಿನ ವ್ಯವಸ್ಥೆ ಹಾಗೂ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಬೇಕು**

***ಪ್ರತಿ ಹಳ್ಳಿಯಲ್ಲೇ ಗ್ಯಾಸ್ ಸರಬರಾಜು ಸಿಬ್ಬಂದಿ ಇ-ಕೆವೈಸಿ ಪ್ರಕ್ರಿಯೆ ನಡೆಸಬೇಕು**

***ಗ್ಯಾಸ್ ವಾಹನಗಳಲ್ಲಿ ಧ್ವನಿವರ್ಧಕಗಳ ಮೂಲಕ ಇ-ಕೆವೈಸಿ ಕುರಿತು ಜಾಗೃತಿ ಮೂಡಿಸಬೇಕು**

***ವಾಣಿಜ್ಯ ಗ್ಯಾಸ್ ಸರಬರಾಜು ಸರಾಗವಾಗಿರುವಾಗ, ಗೃಹ ಬಳಕೆ ಗ್ಯಾಸ್ ಕೊರತೆ ಕುರಿತು ತನಿಖೆ ನಡೆಸಬೇಕು**

ಈ ಸಂದರ್ಭದಲ್ಲಿ ಅಧ್ಯಕ್ಷ ಮಾದೇಶ ಸರ್ಜಾಪುರ, ಪ್ರಧಾನ ಕಾರ್ಯದರ್ಶಿ ಶರಣಬಸವ ಈಚನಾಳ, ಉಪಾಧ್ಯಕ್ಷ ಬಸವರಾಜ ಪೇರಿ, ಸಂಘಟನೆ ಕಾರ್ಯದರ್ಶಿ ಮುತ್ತಣ್ಣ ಗುಡಿಹಾಳ, ನಗರ ಘಟಕ ಅಧ್ಯಕ್ಷ ರಾಜು ರೆಡ್ಡಿ, ಉಪಾಧ್ಯಕ್ಷ ಜಗನ್ನಾಥ ಜಾಧವ, ಸಂಚಾಲಕರಾದ ಈಶ್ವರ ವಿಶ್ವಕರ್ಮ, ಮಂಜುನಾಥ ಬಳ್ಳಾರಿ, ಅಮರೇಶ ಪವಾರ್, ಅಮರೇಶ ಗುರುಗುಂಟಾ, ಪರಮಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಭಾರತೀಯ ಜನತಪಾರ್ಟಿ ಮಾನ್ವಿ ಮಂಡಲ ನಿಯೋಗದಿಂದ ಜಿಲ್ಲಾಧಿಕಾರಿಗಳಿಗೆ ಮನವಿ



ಧೈರ್ಯದ ದಾರಿ

**ಮಾನ್ವಿ:** ಮಾನ್ವಿ ತಾಲೂಕಿನ ವಿವಿಧ ಸಮಸ್ಯೆಗಳ ಕುರಿತು ರಾಯಚೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ನಿತೀಶ್ .ಕೆ ರವರಿಗೆ ಮಾಜಿ ಶಾಸಕ ಗಂಗಾಧರ ನಾಯಕ ನೇತೃತ್ವದಲ್ಲಿ ಭಾರತೀಯ ಜನತಪಾರ್ಟಿ ಮಾನ್ವಿ ಮಂಡಲ ನಿಯೋಗ ತೆರಳಿ ಮನವಿ ಸಲ್ಲಿಸಲಾಯಿತು ನಂತರ ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ ಸಾರ್ವಜನಿಕರ ಸುಗಾಮ ಸಂಚಾರಕ್ಕೆ ಅನುಕೂಲವಾಗುವಂತೆ ಪಟ್ಟಣದ ಬಸ್ ನಿಲ್ದಾಣದ ಹತ್ತಿರದ ಮುಖ್ಯರಸ್ತೆಯಲ್ಲಿನ ಕಾಯಿಪಲ್ಲೆ ,ತಳ್ಳುಬಂಡಿ ವ್ಯಾಪಾರಿಗಳನ್ನು ಸ್ಥಳಾಂತರಿಸಬೇಕು, ಪುರಸಭೆಯಿಂದ ಪಟ್ಟಣಕ್ಕೆ ನೀರು ಪೂರೈಸುವ ಪಂಪಾ ಉದ್ಯಾನವನದಲ್ಲಿರುವ 63 ಕೆ.ವಿ.ಎ ಜನರೇಟರನ್ನು ದುರಸ್ಥಿಗೊಳಿಸಬೇಕು . ನೀರಿನ ಟ್ಯಾಂಕ್ ತುಂಬಿಸುವ ಸಮಯದಲ್ಲಿ ನೀರು ಪೋಲಾಗದಂತೆ ಕ್ರಮ ಕೈಗೊಳ್ಳಬೇಕು. ಟ್ಯಾಂಕಿನಿಂದ ವಿವಿಧ ವಾರ್ಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ನಿಗದಿತ ಸಮಯವನ್ನು ನಿಗದಿಗೋಳಿಸಿ ನೀರು ಬಿಡಬೇಕು. ಸಾರ್ವಜನಿಕ ಸ್ಥಳಗಳಲ್ಲಿನ ಕಸವನ್ನು ನಿಯಮಿತವಾಗಿ ವಿಲೇವಾರಿಮಾಡ ಬೇಕು. ಚರಂಡಿ ಸ್ವಚ್ಚಗೊಳಿಸಬೇಕು. ಅನಧಿಕೃತಶುದ್ದ ಕುಡಿಯುವ ನೀರಿನ ಘಟಕಗಳ ಮೇಲೆ ಕ್ರಮ ಕೈಗೊಳ್ಳಬೇಕು. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಬೇಕು. ರಾಜ್ಯ ಹೆದ್ದಾರಿ-23 ಮತ್ತು ರಾಜ್ಯ ಹೆದ್ದಾರಿ ಪಕ್ಕದಲ್ಲಿನ ಮಾಂಸದ ಅಂಗಡಿಗಳನ್ನು ,ಬೀದಿ ನಾಯಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಬೇಕು. ಬೀದಿ ದೀಪಗಳನ್ನು ಸರಿಪಡಿಸಬೇಕು. ಘನತ್ಯಾಜ್ಯ ವಿಲೇವಾರಿ ಘಟಕ ಕಳಪೆಯಾಗಿ ನಿರ್ಮಿಸಲಾಗಿದು ಸೂಕ್ತ ತನಿಖೆಯನ್ನು ನಡೆಸಬೇಕು.ಪಟ್ಟಣದಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ರಾಜ ಕಾಲುವೆಗಳ ನಿರ್ಮಾಣ ಮಾಡಬೇಕು, ಆರ್.ಜಿ.ಕ್ಯಾಂಪ್ ರಸ್ತೆಯ ಕಾಲುವೆಗೆ ಸಮರ್ಪಕ ಸೇತುವೆ ನಿರ್ಮಾಣ ಮಾಡಬೇಕು. ಜಯನಗರ, ವಿಜಯನಗರ, ಬಿಜಲಿ ಲೇಔಟ, ವಿನಾಯಕ ನಗರ ಸೇರಿದಂತೆ ವಿವಿಧ ವಾರ್ಡಗಳಲ್ಲಿ ರಸ್ತೆ,ಚರಂಡಿ, ಬೀದಿ ದೀಪಗಳ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ.ರಾಜಕಾಲುವೆ ನಿರ್ಮಾಣಮಾಡುವ ಮೂಲಕ ಮಾನ್ವಿ ಪಟ್ಟಣದ ಜನರಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿದರು.

ಈಲ್ಲಾ ರೈತ ಮೋರ್ಚಾ ಅಧ್ಯಕ್ಷರಾದ ದೊರಬಾಬು, ಜಿಲ್ಲಾ ಭಾರತೀಯ ಜನತಾ ಪಾರ್ಟಿ ಉಪಾಧ್ಯಕ್ಷರಾದ ಶರಣಪ್ಪ ಗೌಡ ನಕ್ಕುಂದಿ , ಮಾಜಿ ಮಂಡಲ ಅಧ್ಯಕ್ಷ ಜೆ. ಸುಧಾಕರ್, ಟಿ.ಪಿ.ಸಿ.ಎಂ.ಎಸ್ . ಅಧ್ಯಕ್ಷ ತಿಮ್ಮಾರೆಡ್ಡಿ ಭೋಗಾವತಿ, ವಿಶ್ವನಾಥ್ ನಂದ್ಯಾಳ .ಎಂ ಶ್ರೀನಿವಾಸ್, ರವಿಕುಮಾರ್ ಸಾಹುಕಾರ, ಜಿ. ಉಮಾಪತಿನಾಯಕ್, ಶಿವಕುಮಾರ್, ಶರಣಯ್ಯ ಸ್ವಾಮಿ.ಜಗದೀಶ್ ಒತ್ತೂರು, ಚನ್ನಬಸವ ಜಾನೆಕಲ್, ಶಿವಕುಮಾರ, ವೀರೇಶಯಾದವ್, ಬಸವ ಪ್ರಭು ಪಾಟೀಲ್,ವೀರನಗೌಡ ವಕೀಲರು ,ಗೋಪಾಲ ಇಭ್ರಮಾಪುರ್ ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು ಇದ್ದರು.

**ಮೊದಲನೇ ಪುಟದಿಂದ**

## ಮೋದಿ–ದೀದಿ ಕೊನೆ ಫೈಟ್ : ಇಂದು ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಮತದಾನ

2021 ರಲ್ಲಿ, ಟಿಎಂಸಿ ಕೋಲ್ಕತ್ತಾದ ಎಲ್ಲಾ 11 ಸ್ಥಾನಗಳನ್ನು, ಹೌರಾದಲ್ಲಿ ಎಲ್ಲಾ 16 ಸ್ಥಾನಗಳನ್ನು, ದಕ್ಷಿಣ 24 ಪರಗಣಗಳಲ್ಲಿ 31 ರಲ್ಲಿ 30 ಸ್ಥಾನಗಳನ್ನು, ಉತ್ತರ 24 ಪರಗಣಗಳಲ್ಲಿ 33 ರಲ್ಲಿ 28 ಸ್ಥಾನಗಳನ್ನು, ಹೂಗ್ಲಿಯಲ್ಲಿ 18 ರಲ್ಲಿ 14 ಸ್ಥಾನಗಳನ್ನು ಮತ್ತು ನಾಡಿಯಾದಲ್ಲಿ 17 ರಲ್ಲಿ ಎಂಟು ಸ್ಥಾನಗಳನ್ನು ಗೆದ್ದಿತು.

2021 ರ ಚುನಾವಣೆಯ ನಂತರದ ಹಿಂಸಾಚಾರದ ಹಿನ್ನೆಲೆಯಲ್ಲಿ, ಚುನಾವಣೆಯ ನಂತರ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು 60 ದಿನಗಳ ಕಾಲ ಬಂಗಾಳದಲ್ಲಿ ಉಳಿಯುತ್ತವೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ವ್ಯಾಪಕವಾಗಿ ಓದಲಾಯಿತು. ಈ ಸಂದರ್ಭದಲ್ಲಿ ವಿರೋಧ ಪಕ್ಷದ ಕಾರ್ಯಕರ್ತರ ಕೊಲೆಗಳು, ಬೆಂಕಿ ಹಚ್ಚುವಿಕೆ, ಹಲ್ಲೆಗಳು ಮತ್ತು ಸ್ಥಳಾಂತರದ ಆರೋಪಗಳು ರಾಜಕೀಯ ಚರ್ಚೆಯಲ್ಲಿ ಪ್ರಾಬಲ್ಯ ಸಾಧಿಸಿದವು.

ಟಿಎಂಸಿ ವಿರೋಧಿ ಮತದಾರರು ಆಡಳಿತ ಪಕ್ಷದ ವಿರುದ್ಧ ಮತ ಚಲಾಯಿಸಿದರೆ ಚುನಾವಣೆಯ ನಂತರದ ಪ್ರತೀಕಾರ ಕ್ರಮಗಳು ಅನುಸರಿಸುವುದಿಲ್ಲ ಎಂದು ಭರವಸೆ ನೀಡುವ ಗುರಿಯನ್ನು ಈ ಸಂದೇಶ ಹೊಂದಿದೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ.ಟಿಎಂಸಿ ಇದನ್ನು ಭೀತಿಯ ರಾಜಕೀಯ ಎಂದು ತಳ್ಳಿಹಾಕಿತು, ಬಿಜೆಪಿ ದೆಹಲಿಯಿಂದ ಬಂಗಾಳವನ್ನು ಓಡಿಸಲು ಪ್ರಯತ್ನಿಸುತ್ತಿದೆ ಮತ್ತು ಕೇಂದ್ರ ಸಂಸ್ಥೆಗಳು ಮತ್ತು ಸಂಸ್ಥೆಗಳನ್ನು ಶಸ್ತ್ರಸಜ್ಜಿತಗೊಳಿಸುತ್ತಿದೆ ಎಂದು ಆರೋಪಿಸಿತು.

ಟಿಎಂಸಿ ಕಲ್ಯಾಣ ರಾಜಕೀಯ ಮತ್ತು ಗುರುತಿನೊಂದಿಗೆ ಪ್ರತಿಕ್ರಿಯಿಸಿದೆ ಮತ್ತು ಚುನಾವಣೆಯನ್ನು ಬಂಗಾಳದ ಹಕ್ಕುಗಳನ್ನು ರಕ್ಷಿಸುವ ಹೋರಾಟವಾಗಿ ರೂಪಿಸಿದೆ, ಬಿಜೆಪಿಯ ಅಂತಿಮ ಆಟ ಎನ್‌ಆರ್‌ಸಿ ಮತ್ತು ಸಾಮಾಜಿಕ ವಿಭಜನೆಯಾಗಿ ಉಳಿದಿದೆ ಎಂದು ಎಚ್ಚರಿಸಿದೆ. ಮೊದಲ ಹಂತದ 93.19 ಪ್ರತಿಶತ ಮತದಾನವನ್ನು ದಾಖಲಿಸಿದ ನಂತರ ರಾಜ್ಯದಲ್ಲಿ ಇದುವರೆಗಿನ ಅತ್ಯಧಿಕ ಟಿಎಂಸಿ ಈಗಾಗಲೇ 100 ಸ್ಥಾನಗಳ ಗಡಿಯನ್ನು ದಾಟಿದೆ ಎಂದು ಬ್ಯಾನರ್ಜಿ ಹೇಳಿದ್ದಾರೆ.

## ರಂಗಾಯಣದಲ್ಲಿ ಮಕ್ಕಳ ಹಬ್ಬ, ಬೇಸಿಗೆ ರಂಗ ತರಬೇತಿ ಶಿಬಿರ



**ಕಲಬುರಗಿ,ಏ.28**–ಕಲಬುರಗಿ ರಂಗಾಯಣವು ಏ.7 ರಿಂದ ಮೇ.8ರವರೆಗೆ ರಂಗಾಯಣ ಆವರಣದಲ್ಲಿ ಆಯೋಜಿಸಿರುವ ಮಕ್ಕಳ ಹಬ್ಬ–2026 ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರದಲ್ಲಿ ಒಟ್ಟು 78 ಜನ ಮಕ್ಕಳು ದಾಖಲಾತಿ ಪಡೆದಿದ್ದು, ಏ.7 ರಿಂದ ಶಿಬಿರ ಪ್ರಾರಂಭವಾಗಿದೆ. ಮಕ್ಕಳಿಗೆ ಸಂಗೀತ ,ನೃತ್ಯ , ಮೈಮು, ನಾಟಕ, ತರಬೇತಿಗಳು ನೀಡಲಾಗುತ್ತಿದೆ. ಅದರ ಜೊತೆಗೆ ಪ್ರತಿ ದಿನ ಒಂದೊಂದು ಕಲಾ ಪ್ರಕಾರವಾದ ಅಂದರೆ ಹೆಜ್ಜೆ ಮೇಳ, ಡೊಳ್ಳು ಕುಣಿತ, ಜಾನಪದ ಜಾದು, ಕುಂಬಾರನ ಕಲೆ ಪ್ರದರ್ಶನ, ಮಕ್ಕಳಿಂದ ಕೈಗೊಂಬೆ, ಚಿತ್ರಕಲೆ, ಕ್ಲೇಮಾಡಲಿಂಗ್, ವಿವಿಧ ಕ್ಷೇತ್ರದ ಸಾಧಕರೊಂದಿಗೆ ಸಂವಾದ, ಮಕ್ಕಳಿಗೆ ಕಥಾವಾಚನ, ಮಕ್ಕಳಿಂದ ಕಥೆ ಹೇಳಿಸುವುದು ಹೀಗೆ ಎಲ್ಲಾ ಪ್ರಕಾರದ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡಲಾಗುತ್ತಿದೆ ಅಂಥ ವಿಕಲಚೇತನರಾದ ಬಸವರಾಜ ಅವರು ತಮ್ಮ ಅಗಾಧವಾದ ಪಾಂಡಿತ್ಯದಿಂದ ಮಕ್ಕಳಿಗೆ ಗಣಿತ ವಿಷಯದ ಕುರಿತು ಸರಳವಾದ ಸೂತ್ರಗಳನ್ನು ಹೇಳಿದರು ಅಲ್ಲದೆ ಕಬ್ಬಿಣದ ಕಡಲೆಯಂತೆ ಇರುವ ಗಣಿತವನ್ನು ಹೇಗೆ ಸರಳಿಕರಿಸಿಕೊಂಡು ಅರಿತುಕೊಳ್ಳಬೇಕು ಎಂಬುದರ ಬಗ್ಗೆ ಮಕ್ಕಳಿಗೆ ಮನನ ಮಾಡಿಸಿದರು.

ನಾಗನಾಥ ಯಾದಗಿರ ಅವರು ಮಕ್ಕಳಿಗೆ ಸ್ಥಳೀಯ ಪಕ್ಷಿಗಳು ಹಾಗೂ ಕಲಬುರಗಿಗೆ ಬರುವ ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ದೇಶಗಳಿಂದ, ಬೇರೆ ಬೇರೆ ಖಂಡಗಳಿಂದ ಬರುವ ಪಕ್ಷಿಗಳ ಪರಿಚಯ ಮಾಡಿಕೊಟ್ಟರು. ಪಕ್ಷಿ ಪ್ರಪಂಚದ ವಿಚಿತ್ರ ಸಂಗತಿಗಳನ್ನು ಮಕ್ಕಳಿಗೆ ಪರಿಚಯಿಸಿದರು. ಅಗ್ನಿ ಶಾಮಕದಳದವರನ್ನು ಕರೆಯಿಸಿ ಅಗ್ನಿ ದುರಂತ ನಡೆದರೆ ಮೊದಲು ಏನು ಮುನ್ನೆಚ್ಚರಿಕೆ ತಗೆದುಕೊಳ್ಳಬೇಕು, ಬೆಂಕಿಯನ್ನು ಯಾವರೀತಿ ನಂದಿಸಬೇಕು ಎಂದು ಪ್ರಾತ್ಯಕ್ಷತೆ ನೀಡಿ ಮಕ್ಕಳಿಗೆ ಅರಿವು ನೀಡಿದರು ಮತ್ತು ಈಡಿಜ ಇಟಿರುಟಿಜ ನಲ್ಲಿ ಇರುವ ನೀರನ್ನು ಕಾರಂಜಿ ತರ ನೀರು ಬಿಟ್ಟು ಅದರಲ್ಲಿ ಮಕ್ಕಳು ಬಣ್ಣದ ಆಡವಾಡಿ

ಸಂಭ್ರಮಿಸಿದರು. ಮಕ್ಕಳಿಗೆ ಸ್ಥಳಿಯ ಪ್ರೇಕ್ಷಣಿಯ ಮತ್ತು ಐತಿಹಾಸಿಕ ಸ್ಥಳಗಳ ಕಿರುಚಿತ್ರ ಮತ್ತು ಮಕ್ಕಳಿಗಾಗಿಯೆ ಸಿದ್ದಪಡಿಸಿದ ಕೆಲವು ಅಪರೂಪದ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಈ ಮೊದಲು ಎಲ್ಲಾ ಹಳ್ಳಿಗಳಲ್ಲಿ ಮಣ್ಣಿನ ಗಡುಗಿಯುಲ್ಲಿ ಆಹಾರ ತಯಾರಿಸಲಾಗುತ್ತಿತ್ತು ಕ್ರಮೇಣವಾಗಿ ಮಣ್ಣಿನ ಮಡಿಕೆಗಳ ಬದಲು ಜರ್ಮನ್, ಸ್ಟೀಲ್ ಪಾತ್ರಗಳು ಬಂದವು ಆದ್ದರಿಂದ ಮಕ್ಕಳಿಗೆ ಮಣ್ಣಿನ ಗಡುಗಿಗಳ ಮಹತ್ವವನ್ನು ತಿಳಿಸಲು ಮಣ್ಣಿನ ಗಡುಗೆಯಲ್ಲಿ ಅಡುಗೆಯ ರೂಪದಲ್ಲಿ ಮಕ್ಕಳಿಂದ ಮಣ್ಣಿನ ಗಡುಗೆಯಲ್ಲಿ ವಿವಿಧ ತರಹದ ಅಂದರೆ ಪಲಾವ್, ಸುಸಲಾ, ಅವಲಕ್ಕಿ, ಚಿತ್ರಾನ್ನ , ಮ್ಯಾಗಿ, ಮಾಲ್ದಿ, ಹಪ್ಪಳ, ಆಲೂಬಾತ್, ಟಮೊಟ ಬಾಥ್, ಚೂಡಾ, ಮಜ್ಜಿಗೆ ಮತ್ತು ಪಾಯಸ, ಸೀರಾ, ನಿಂಬೆಹಣ್ಣ ಪಾನಕ, ಲಸ್ಸಿ, ಮೊಸರನ್ನ, ಮಾವಿನ ಹಣ್ಣಿನ ಜ್ಯೂಸ ಅನೇಕ ರೀತಿಯ ತಿಂಡಿ ತಿನಿಸುಗಳನ್ನು ಅಡುಗೆ ಮಾಡಿದ ರುಚಿಕರ ಆಹಾರವನ್ನು ಬಂದ ಸಾರ್ವಜನಿಕರು, ಮಕ್ಕಳ ಪಾಲಕರು, ಇಲಾಖೆಯ ಜಂಟಿ ನಿರ್ದೇಶಕರು, ರಂಗಾಯಣದ ನಿರ್ದೇಶಕರು, ರಂಗಾಯಣದ ಆಡಳಿತಾಧಿಕಾರಿಗಳು, ಶಿಬಿರದ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಿಬ್ಬಂದಿಗಳು ಮಕ್ಕಳಿಂದ ಸಿದ್ದವಾದ ಆಹಾರ ಸವಿದು ಮಕ್ಕಳೊಂದಿಗೆ ಸಂಭ್ರಮಿಸಿದರು.

ಮಕ್ಕಳ ವ್ಯವಹಾರಿಕ ಜ್ಞಾನ ವೃದ್ಧಿಯಾಗಲು ಮಕ್ಕಳಿಂದ ಸಂತೆ ಆಯೋಜಿಸಿ ಆ ಸಂತೆಯಲ್ಲಿ ಅವರು ವಿವಿಧ ಸಾಮಾಗ್ರಿ ಅಂದರೆ ಹಣ್ಣು, ತರಕಾರಿ, ಪಾನಿಪೂರಿ, ಮಜ್ಜಿಗೆ, ಜೂಸ್, ಕಿರಾಣಿ ಸಾಮಾಗ್ರಿ, ಸ್ಟೇಷನರಿ ಸಾಮಾಗ್ರಿ, ಪುಸ್ತಕಗಳು ಮತ್ತು ಇತ್ಯಾದಿ ಸಾಮಾಗ್ರಿಗಳ ಮಾರಾಟ ಮಾಡುವುದು. ಅಲ್ಲಿ ಬಂದ ಸಾರ್ವಜನಿಕರು, ಪಾಲಕರು ಮಕ್ಕಳಿಂದ ವಿವಿಧ ರೀತಿಯ ಸಾಮಗ್ರಿಗಳನ್ನು ಖರೀದಿಸುವುದಾಗಿದೆ. ಈ ಸಂತೆಯಲ್ಲಿ ಸಂಪನ್ಮೂಲ ವ್ಯಕ್ತಿಗಳು ವಿವಿಧ ವೇಷಭೂಷಣಗಳನ್ನು ಹಾಕಿಕೊಂಡು ಸಂತೆಯಲ್ಲಿ ಅವರ ಅಭಿನಯದೊಂದಿಗೆ ಅಲ್ಲಿ ಬಂದ ಜನರಿಗೆ ಮತ್ತು ಮಕ್ಕಳಿಗೆ ಮನೋರಂಜನೆ ಮಾಡಲಾಗಿದೆ ಕೊನೆಯಲ್ಲಿ ಮಕ್ಕಳಿಂದ ಸಿದ್ದವಾಗುವ 5 ನಾಟಕಗಳು ಮತ್ತು ಒಂದು ಬಯಲಾಟ ಹಾಗೂ ಸಂಗೀತ, ನೃತ್ಯಗಳನ್ನು ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರದರ್ಶಿಸಲಾಗುತ್ತದೆ. ಈ ಎಲ್ಲಾ ಚಟುವಟಿಕೆಗಳು ಮಾನ್ಯ ನಿರ್ದೇಶಕರಾದ ಡಾ.ಸುಜಾತಾ ಜಂಗಮಶೆಟ್ಟಿ, ಕಲಬುರಗಿ ವಲಯ ಜಂಟಿ ನಿರ್ದೇಶಕರಾದ ಬಸವರಾಜ ಹೂಗಾರ ಹಾಗೂ ಆಡಳಿತಾಧಿಕಾರಿಗಳಾದ ಸಿದ್ರಾಮ ಸಿಂಧೆ ಅವರ ಮಾರ್ಗದರ್ಶನದಲ್ಲಿ ಹಾಗೂ ರಾಜಕುಮಾರ ಎಸ್.ಕೆ ಸಂಚಾಲಕತ್ವದಲ್ಲಿ ರೆಪರ್ಟರಿ ಕಲಾವಿದರು ಶ್ರದ್ಧೆಯಿಂದ ಮಕ್ಕಳಿಗೆ ತರಬೇತಿ ನೀಡಿರುವುದರಿಂದ ಈ ತರಬೇತಿ ಯಶಸ್ವಿಯಾಗಿ ಮುಕ್ತಾಯಗೊಳ್ಳುತ್ತಿದೆ ಕೆಲವೆ ದಿನಗಳಲ್ಲಿ ಸಮಾರೋಪ ಸಮಾರಂಭ ಜರುಗಲಿದೆ.

## ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಯತ್ನಾಳ ಭೂಮಿಪೂಜೆ



**ವಿಜಯಪುರ:ಏ.28:** ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ರವರು ಶನಿವಾರ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ನಗರ ಮತಕ್ಷೇತ್ರದ ವ್ಯಾಪ್ತಿಯ ಖಂಡಸಾರಿ ತಾಂಡಾದಲ್ಲಿ ರೂ.1 ಕೋಟಿ ಅನುದಾನದಲ್ಲಿ ತಾಂಡಾದ ಮುಖ್ಯ ರಸ್ತೆ ಮತ್ತು ಆಂತರಿಕ ಸಿಸಿ ರಸ್ತೆ ಅಭಿವೃದ್ಧಿಪಡಿಸುವುದು ಹಾಗೂ ರೂ.5 ಲಕ್ಷ ಅನುದಾನದಲ್ಲಿ ಸೇವಾಲಾಲ್ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಇದೇ ವೇಳೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ದಿಂದ ಸನ್ 2025–26ನೇ ಸಾಲಿನ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಿಸಲಾದ ಅನುದಾನದಲ್ಲಿ ಅಳವಡಿಸಲಾದ ಹೈಮಾಸ್ಟ್ ದೀಪ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿದರು.

ಇದಕ್ಕೂ ಮೊದಲು ವಾರ್ಡ್ ನಂ.1 ರಲ್ಲಿ ಬರುವ ಶಕ್ತಿ ನಗರ ರವೀಂದ್ರನಾಥ ಟ್ಯಾಗೋರ್ ಶಾಲೆ ಎದುರು ಮುಖ್ಯಮಂತ್ರಿಯುವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಾದ 2025–26ನೇ ಸಾಲಿನ ರೂ.25 ಲಕ್ಷ ಅನುದಾನದಲ್ಲಿ ಶಕ್ತಿ ನಗರ ಶಿವಶಿಂಪಿ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಮಹಾನಗರ ಪಾಲಿಕೆ ಸದಸ್ಯರು, ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಅಪೇಕ್ಷಣೆಗೆ ಅರ್ಜಿ ಆಹ್ವಾನ

**ರಾಯಚೂರು:** ಶಿಶು ಅಭಿವೃದ್ಧಿ ಯೋಜನೆ ರಾಯಚೂರು ವ್ಯಾಪ್ತಿಗೆ ಬರುವ ರಾಮಾಂಜಿನೇಯ್ಯ ಕಾಲೋನಿ–01ನೇ ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿಯ ಶ್ರೀಮತಿ ಪದ್ಮಾವತಿ ಗಂಡ ಡಿ. ಹೆಚ್.ಆನಂದ ಪರಿಶಿಷ್ಟ ಪಂಗಡ ಅವರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವುದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ:28–04–2026 ರಿಂದ 06–05–2026 ರೊಳಗಾಗಿ ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 01:30 ರವರೆಗೆ ಶಿಶು ಅಭಿವೃದ್ಧಿ ಇಲಾಖೆಗೆ ಅರ್ಜಿ ಸಲ್ಲಿಸಬಹುದೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐಟಿಐ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**ರಾಯಚೂರು :** ರಾಯಚುರು ನಗರದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ವಿವಿಧ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 10ನೇ ತತ್ಸಮಾನ ಅಥವಾ 8ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿಯನ್ನು ಮೇ.08ರೊಳಗಾಗಿ ಸಲ್ಲಿಸಬಹುದಾಗಿದೆ.

ಅರ್ಜಿಯನ್ನು ಹತ್ತಿರದ ಯಾವುದೇ ಸರ್ಕಾರಿ/ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ವೆಬ್ ಸೈಟ್ ವಿಳಾಸ: WWW.CITE.KARNATAKA.GOV.IN ನಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ವಿಳಾಸವನ್ನು ಹೊಂದಿರಬೇಕು.

ಪ್ರವೇಶಾತಿ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯೋಪಾಧ್ಯಯರಿಂದ ಸಹಿ ಪಡೆದಿರುವ 10ನೇ ತತ್ಸಮಾನ ಅಥವಾ 8ನೇ ತರಗತಿಯಲ್ಲಿ ಉತ್ತೀರ್ಣ ಅಂಕಪಟ್ಟಿ, ಇತ್ತೀಚಿನ 2 ಭಾವಚಿತ್ರ, ಜಾತಿ ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸಲೆಬೇಕು. 371 ಜೆ ಪ್ರಮಾಣ ಪತ್ರ, ಗ್ರಾಮೀಣ ಮತ್ತು ವ್ಯಾಸಂಗ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಾರ್ಷಿಕ ಬೋಧನಾ ಶುಲ್ಕ ರೂ1200/– ಅನ್ನು ವಿನಾಯಿತಿ ನೀಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸಂಪರ್ಕಿಸಬಹುದಾಗಿದೆ ಎಂದು ರಾಯಚೂರಿನ ಸರ್ಕಾರಿ ಐಟಿಐ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಸಿಕಾ ಕೇಂದ್ರದ ನೂತನ ಕಟ್ಟಡ, ಜಿಲ್ಲಾ ಸಂಯೋಜಿತ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯ ಉದ್ಘಾಟನೆ



**ಧಾರವಾಡ,ಏ28:** ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡಲು ಸರ್ಕಾರವು ಸುಸಜ್ಜಿತ ಆರೋಗ್ಯ ಕೇಂದ್ರಗಳನ್ನು ಒದಗಿಸುತ್ತಿರುವುದು ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಜನಪರವಾದ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಜಾರಿಗೆ ತರಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಅವರು ಹೇಳಿದರು.

ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಲಸಿಕಾ ಕೇಂದ್ರವನ್ನು ಮತ್ತು ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಜಿಲ್ಲಾ ಸಂಯೋಜಿತ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯವನ್ನು ಉದ್ಘಾಟಿಸಿದರು.

ನಂತರ ಅವರು, ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಸಾರ್ವಜನಿಕರಿಗೆ ಅಗತ್ಯ ಇರುವ ಔಷಧಿಗಳು ದಾಸ್ತಾನು ಇದ್ದು, ಯಾವುದೇ ಆರೋಗ್ಯ ಕೇಂದ್ರಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ಕ್ರಮವಹಿಸಿದ್ದು, ಬೇಡಿಕೆ ಬಂದಲ್ಲಿ ತಕ್ಷಣ ಔಷಧಿ ಸರಬರಾಜು ಕಾರ್ಯವನ್ನು ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಆರೋಗ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಸಂಖ್ಯೆ ಕಡಿಮೆ ಇರುವದರಿಂದ, ಅಗತ್ಯವಿರುವಲ್ಲಿ ಪಾಳೆಯ ಮುಖಾಂತರ ಕಾರ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. 225 ತಜ್ಞ ವೈದ್ಯರು, ವೈದ್ಯರನ್ನು ನೇಮಕ ಮಾಡಿಕೊಳ್ಳಲು ಚಾಲನೆ ನೀಡಿಲಾಗಿದೆ. ಖಾಲಿ ಇರುವ ಹುದ್ದೆಗಳಿಗೂ ಭರ್ತಿ ಮಾಡಿಕೊಳ್ಳಲು ಹೊಸ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳಿಸಲಾಗಿದೆ ಎಂದು ಅವರು ಹೇಳಿದರು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಅವರು ಮಾತನಾಡಿ, ದೇಶದಲ್ಲಿ ಸಾರ್ವಜನಿಕ ಆರೋಗ್ಯ ಅಭಿವೃದ್ಧಿಪಡಿಸಿಲು ಮತ್ತು ಆರೋಗ್ಯ ಕ್ಷೇತ್ರದಲ್ಲಿ ಹೊಸ ಉಪಕರಣ, ಸಂಶೋಧನೆ ಮತ್ತು ಜನ ಸಾಮಾನ್ಯರಿಗೆ ಅಗತ್ಯವಿರುವ ಔಷಧಿಗಳನ್ನು ಪೂರೈಸಲು ಕೇಂದ್ರ ಸರ್ಕಾರವು ಹೆಚ್ಚು ಆದ್ಯತೆ ನೀಡಿದೆ. ಲಸಿಕಾ (ವ್ಯಾಕ್ಸಿನ್) ದಾಸ್ತಾನು ಸೌಲಭ್ಯಗಳ ಕಟ್ಟಡಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಟ್ಟಲಾಗುತ್ತಿದೆ. ಲಸಿಕೆಗಳನ್ನು ಸುಸಜ್ಜಿತ ಕಟ್ಟಡ ಮತ್ತು ಸೌಲಭ್ಯಗಳಿರುವ ದಾಸ್ತಾನುಗಳಲ್ಲಿ ಶೇಖರಿಸಬೇಕು. ಅದಕ್ಕಾಗಿ ಕೇಂದ್ರ ಸರ್ಕಾರವು ಪ್ರತಿ ರಾಜ್ಯದಲ್ಲಿ ಸುಸಜ್ಜಿತ ಲಸಿಕಾ ದಾಸ್ತಾನು ಕಟ್ಟಡ ನಿರ್ಮಿಸಲು ರಾಜ್ಯ ಸರ್ಕಾರಗಳಿಗೆ ಅಗತ್ಯ ಅನುದಾನ ನೀಡಿ, ಸಹಭಾಗಿತ್ವದಲ್ಲಿ ನಿರ್ಮಿಸುತ್ತಿದೆ ಎಂದು ಅವರು ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್.ಲಾಡ್ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಮತ್ತು ಉನ್ನತ ದರ್ಜೆಯಲ್ಲಿ ಚಿಕಿತ್ಸೆ ಹಾಗೂ ಔಷಧಿ ದೊರಕುವಂತೆ ಕ್ರಮವಹಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಆಸ್ಪತ್ರೆಗಳ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಮತ್ತು ಅಗತ್ಯವಿರುವಲ್ಲಿ ವಿಸ್ತೀರ್ಣ ಕಟ್ಟಡ, ನೂತನ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಅರವಿಂದ ಬೆಲ್ಲದ ಅವರು ವಹಿಸಿದ್ದರು. ಶಾಸಕರಾದ ಎನ್.ಎಚ್.ಕೋನರಡ್ಡಿ, ಎಫ್.ಹೆಚ್.ಜಕ್ಕಪ್ಪನವರ, ಹುಬ್ಬಳ್ಳಿ–ಧಾರವಾಡ ಮಹಾನಗರ ಮಹಾಪೌರರಾದ ಜ್ಯೋತಿ ಪಾಟೀಲ, ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಎಸ್.ಎಂ.ಹೊನಕೇರಿ, ಆರ್.ಸಿ.ಎಚ್.ಓ ಅಧಿಕಾರಿ ಡಾ.ಸುಜಾತ ಹಸುವಿಮಠ, ಧಾರವಾಡ ತಾಲೂಕಾ ವೈದ್ಯಾಧಿಕಾರಿ ಡಾ. ಕೆ.ಎನ್. ತನುಜಾ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಆರೋಗ್ಯ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

## ನಾಯಕತ್ವ ಬದಲಾವಣೆ ಹೈಕಮಾಂಡ್ ತೀರ್ಮಾನ: ಪರಮೇಶ್ವರ



**ಕಲಬುರಗಿ,ಏ.28**–ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಹೈ ಕಮಾಂಡ್ ತೀರ್ಮಾನ ಕೈಗೊಳ್ಳಲಿದೆ. ಹೈ ಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು. ನಗರದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಗೊಂದಲ ಏನಿಲ್ಲ. ಸರ್ಕಾರ, ಆಡಳಿತ, ಕಾರ್ಯಕ್ರಮ ಎಲ್ಲವೂ ಸರಿಯಾಗಿ ನಡೆಯುತ್ತಿವೆ.

4 ಲಕ್ಷ ಕೋಟಿ ಬಜೆಟ್ ನೀಡಿದ್ದೇವೆ. ಏನೇ ಗೊಂದಲಗಳಿದ್ದರು ಅದನ್ನು ಹೈಕಮಾಂಡ್ ಬಗೆ ಹರಿಸುತ್ತದೆ. ಎಲ್ಲದಕ್ಕೂ ಆದಷ್ಟು ಶೀಘ್ರದಲ್ಲಿ ಪರಿಹಾರ ಸಿಗಲಿದೆ ಎಂದರು.

ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಂಡರೆ ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

# ಡಾ.ಖರ್ಗೆ ಅವರು ನರೇಂದ್ರ ಮೋದಿಗೆ ಭಯೋತ್ಪಾದಕ ಎಂದು ಕರೆದಿರುವುದರಲ್ಲಿ ತಪ್ಪೇನಿಲ್ಲ : ಅರವಿಂದ ಅರಳಿ




**ಬೀದರ್: ಏ.28:**ಇತ್ತೀಚೆಗೆ ತಮಿಳುನಾಡಿನಲ್ಲಿ ಎಐಸಿಸಿ ಅಧ್ಯಕ್ಷರಾದ ಡಾ. ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಓರ್ವ ಭಯೋತ್ಪಾದಕ ಎಂದು ಹೇಳಿರುವುದರಲ್ಲಿ ತಪ್ಪೇನಿಲ್ಲ ಎಂದು ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ ಹೇಳಿದರು.

ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಜನರನ್ನು ಭಯಪಡಿಸುವವರನ್ನು ಭಯೋತ್ಪಾದಕ ಎಂತಲೆ ಕರೆಯುವುದು. ಹಾಗಾಗಿ ಡಾ.ಖರ್ಗೆ ಅವರು ಸರಿಯಾಗಿಯೆ ಹೇಳಿದ್ದಾರೆ ಎಂದು ಪುನರೂಚ್ಚರಿಸಿದರು.

ಇತ್ತಿಚೀಗೆ ಭಾಲ್ಕಿಯಲ್ಲಿ ನಡೆದ ಅನುಭವ ಮಂಟಪದ ಅಧ್ಯಕ್ಷರಾದ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವದಲ್ಲಿ ಭಾಗಿಯಾದ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ್ ಖರ್ಗೆ ಅವರ ಬಗ್ಗೆ ಮಾತನಾಡುವ ಮೂಲಕ ತಾನೋರ್ವ ಬಿಜೆಪಿಯಲ್ಲಿದ್ದಂತೆ ತೋರಿಸಿಕೊಂಡಿರುವರು. ದೇಶದ ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ರಾಜ್ಯಪಾಲರು ಯಾವುದೇ ಪಕ್ಷದ ಪರವಾಗಿ ಮಾತನಾಡಬಾರದು ಎಂದರು.

ಮಹಾನಗರ ಪಾಲಿಕೆ ಸದಸ್ಯ ಶಶಿಧರ ಹೊಸಳ್ಳಿ ಅವರ ಬಗ್ಗೆ ಮಾತನಾಡಿದ ಅರಳಿ, ಡಾ.ಖರ್ಗೆಯವರ ಬಗ್ಗೆ ಅವಹೇಳನಕಾರಿ ಮಾತನಾಡಿದ ಹೊಸಳ್ಳಿ ವಿರೂದ್ಧ ರಾಜ್ಯ ಸರ್ಕಾರ ಸುಮೋಟೊ ಕೇಸ್ ದಾಖಲಿಸಬೇಕು. ಇಲ್ಲ ಎಂದರೆ ನಮ್ಮ ಪಕ್ಷದ ಯಾರೊಬ್ಬರು ಕಾರ್ಯಕರ್ತರು ಅವರ ವಿರೂದ್ಧ ಠಾಣೆಯಲ್ಲಿ ಕೆಸ್ ದಾಖಲಿಸಬೇಕೆಂದು ಅರಳಿ ಒತ್ತಾಯಿಸಿದರು.

ಮಾಜಿ ವಿಧಾನ ಪರಿಷತ್ ಸದಸ್ಯರಾದ ಕೆ.ಪುಂಡಲಿಕರಾವ, ಮಹಾನಗರ ಪಾಲಿಕೆ ಅಧ್ಯಕ್ಷ ಮಹಮ್ಮದ್ ಗೌಸೋದ್ದಿನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಂಜಯ ಜಾಗಿರದಾರ, ಮನ್ನಾನ್ ಸೇಠ್, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಅಮೃತರಾವ ಚಿಮಕೊಡೆ, ಮಹಾನಗರ ಪಾಲಿಕೆ ಸದಸ್ಯ ಪ್ರಶಾಂತ ದೊಡ್ಡಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಪತ್ರಿಕಾಗೋಷ್ಠಿಯಲ್ಲಿದ್ದರು

# ವಿಶ್ವ ಕಾರ್ಮಿಕರ ದಿನಾಚರಣೆ ಕರಪತ್ರ ಬಿಡುಗಡೆ :ಸಂಜುಕುಮಾರ ಸಿಂಧೆ



**ಬೀದರ: ಏ.28:**ಬೀದರ ನಗರದ ಡಾ, ಬಿ ಆರ್ ಅಂಬೇಡ್ಕರ ವೃತ್ತದ ಹತ್ತಿರ ಇರುವ ಕರ್ನಾಟಕ ಸಾಂಸ್ಕೃತಿಕ ಸಭಾಂಗಣದಲ್ಲಿ ಮೇ 1 ರಂದು ಬೆಳಗ್ಗೆ 10-30 ಗಂಟೆಯಿಂದ ಕರುನಾಡು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಗಿಲಾವ ಕಾರ್ಮಿಕರ ಸಂಘ ಬೀದರ ವತಿಯಿಂದ ನಡೆಯಲಿರುವ ವಿಶ್ವ ಕಾರ್ಮಿಕರ ದಿನಾಚರಣೆ ಹಾಗೂ ಹಿರಿಯ ಕಾರ್ಮಿಕರಿಗೆ ಈ ವರ್ಷ ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿ ಪರೀಕ್ಷೆಯಲ್ಲಿ ಆಗ್ರಶ್ರೇಣಿಯಲ್ಲಿ ಪಾಸಾಗಿರುವ ಕಾರ್ಮಿಕರ ಮಕ್ಕಳಿಗೆ ಗೌರವ ಸನ್ಮಾನ ಹಾಗೂ ಕಾರ್ಮಿಕರ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಇಂದು 27-4-2026 ರಂದು ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ ವೃತ್ತದಲ್ಲಿ ಕಾರ್ಯಕ್ರಮದ ಕರಪತ್ರಗಳನ್ನು ಬಿಡುಗಡೆ ಮಾಡಿಲಾಯಿತು. ಕಾಯಕವೇ ಕೈಲಾಸವೆಂದು ದುಡಿಮೆಯಲ್ಲಿ ಜೀವನ ನಡೆಸುವ ಕಾರ್ಮಿಕರ ಜೀವನಕ್ಕೆ ಎಂಟು ಗಂಟೆ ದುಡಿಮೆ ದುಡಿಮೆಗೆ ತಕ್ಕವೇತನ ವಾರದ ರಜೆ ಹಾಗೂ ಸರ್ಕಾರದಿಂದ ವಿವಿಧ ಯೋಜನೆಗಳು, ಜಾರಿಗೆ ಇರುವುದರಿಂದ ಕಾರ್ಮಿಕ ಮಕ್ಕಳು ಉನ್ನತ ಶಿಕ್ಷಣ ಮತ್ತು ಉನ್ನತ ಹುದ್ದೆಯನ್ನು ಪಡೆದುಕೊಳ್ಳುತ್ತಿದ್ದಾರೆ.

ವಯೋವೃದ್ಧ ಕಾರ್ಮಿಕರಿಗೆ ಪಿಂಚಣಿ ಹಾಗೂ ಕಾರ್ಮಿಕರಿಗೆ ಮನೆ ಕಟ್ಟಿಕೊಳ್ಳಲು ಸಹಾಯಧನ ಸರ್ಕಾರ ನೀಡುತ್ತಿದೆ. ಕಾರ್ಮಿಕರು ತಮ್ಮ ಸಭೆ ಸಮಾರಂಗಳನ್ನು ಮಾಡಿಕೊಳ್ಳಬೇಕ್ಕಾದರೆ ಜಿಲ್ಲೆಗೊಂದು ಜಿಲ್ಲೆಯ ಎಲ್ಲಾ ತಾಲ್ಲೂಕಿಗೊಂಡು ಕಾರ್ಮಿಕರ ಸಾಂಸ್ಕೃತಿಕ ಭವನ ಅವಶ್ಯವಾಗಿದೆ. ಆ ನಿಟ್ಟಿನಲ್ಲಿ ಕಾರ್ಮಿರ ಕಲ್ಯಾಣ ಮಂಟಪಗಳನ್ನು ನಿರ್ಮಾಣ ಮಾಡಲು ಕಾರ್ಮಿಕ ಸಂಘದ ಮೂಲಕ ಕಾರ್ಯಕ್ರಮವನ್ನು ಮಾಡಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಮೇಲೆ ಒತ್ತಡವನ್ನು ಹಾಕಿ ಕಾರ್ಮಿಕರ ಕಲ್ಯಾಣ ಮಂಟಪವನ್ನು ನಿರ್ಮಾಣ ಮಾಡಿಕೊಳ್ಳಬೇಕ್ಕಾಗಿದೆ. ಆ ನಿಟ್ಟಿನಲ್ಲಿ ಜಿಲ್ಲೆಯಲ್ಲಿರುವ ಎಲ್ಲಾ ನಮ್ಮ ಕಾರ್ಮಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಮದಲ್ಲಿ ಭಾಗವಹಿಸಲು ಪತ್ರಿಕಾ ಪ್ರಕಟಣೆ ಮೂಲಕ ಕರುನಾಡು ಕಟ್ಟಡ ಇತರ ನಿರ್ಮಾಣ ಕಾರ್ಮಿಕರ ಹಾಗೂ ಗಿಲಾವ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷನಾದ ನಾನು ಶ್ರೀ ಸಂಜುಕುಮಾರ ಸಿಂಧೆ ಪದಾಧಿಕಾರಿಗಳಾದ ರವಿ ಗುತ್ತೇದಾರ ನರಸಿಂಗ ಅಮಲಾಪೂರು, ಸಾಹಿತಿಗಳಾದ ಡಾ. ಸುಬ್ಬಣ್ಣ ಕರಕನಳ್ಳಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ( ದಿ. ಲಕ್ಷ್ಮೀ ನಾರಾಯಣ ನಾಗವಾರ ಸ್ಥಾಪಿತ) ಕಲಬುರ್ಗಿ ವಿಭಾಗೀಯ ಸಂಚಾಲಕ ಉಮೇಶಕುಮಾರ ಸೋರಳ್ಳಿಕರ್, ಕಾರ್ಮಿಕ ಮುಖಂಡರಾದ ಶರಣಪ್ಪ, ಶಿವಕುಮಾರ್ ಯಾದ್ಲಾಪುರ, ಸಂಜು, ಸುನೀಲ್ ಕುಮಾರ್, ಬಂದಗೆ ಪಂಡಾರಿನಾಥ್, ತುಕಾರಾಮ್ ಮಿರ್ಜಾಪುರ (ಕೆ ) ತುಕಾರಾಮ್ ಬಸತಪುರ, ಯವನ್, ಲಕ್ಷ್ಮುಮಣ ಶಹಾಪುರ ಗೇಟ್, ನರಸಿಂಗ್ ಚಿದ್ರಿ ಅಶೋಕ್ ವಿದ್ಯಾನಗರ, ನಿವೃತ ಪೊಲೀಸ್ ಅಧಿಕಾರಿ ಬಸವರಾಜ ಮೀಠಾರೆ ಮುಂತಾದವರು ಕರಪತ್ರ ಬಿಡುಗಡೆ ಸಮಾರಂಭದಲ್ಲಿ ಉಪಸ್ಥಿತರಿದ್ದರು

# ಜನಪದ ಲೋಕದಲ್ಲಿ ಹೆಜ್ಜೆ ಗೆಜ್ಜೋತ್ಸವ ಸಂಭ್ರಮ: ಕಲಾವಿದರ ಪ್ರತಿಭೆಗೆ ಮೆಚ್ಚುಗೆ



**ಕಲಬುರಗಿ :ಏ.28:** ಗುಲ್ಬರ್ಗಾ ಡಾನ್ಸ್ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಭಾನುವಾರ "ಜನಪದ ಲೋಕದಲ್ಲಿ ಹೆಜ್ಜೆ ಗೆಜ್ಜೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ್ ಕಾಳಗಿ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜನಪದ ಕಲೆಗಳ ಉಳಿವು ಮತ್ತು ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ಅತ್ಯಂತ ಅವಶ್ಯಕವಾಗಿದ್ದು, ಕಲಾವಿದರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಮತ್ತು ಇಲಾಖೆ ಇನ್ನಷ್ಟು ಅನುದಾನ ಒದಗಿಸಬೇಕೆಂದು ಅಭಿಪ್ರಾಯಪಟ್ಟರು.

ಗುಲ್ಬರ್ಗ ಡಾನ್ಸ್ ಸಂಘದ ಅಧ್ಯಕ್ಷ ವೆಂಕಪ್ಪ ಅಕ್ಷಯ್ ಹಾಗೂ ಅವರ ದಂಪತಿ ಹಲವು ವರ್ಷಗಳಿಂದ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಸಾವಿರಾರು ಕಲಾವಿದರಿಗೆ ವೇದಿಕೆ ಕಲ್ಪಿಸಿರುವುದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದೆಯೂ ತಮ್ಮಿಂದಾಗುವ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸುಮಾರು ಒಂದೂವರೆ ಸಾವಿರಕ್ಕೂ ಅಧಿಕ ಜನರು ಭಾಗವಹಿಸಿ ಸಂಭ್ರಮ ಹೆಚ್ಚಿಸಿದರು.

ಮುಖ್ಯ ಅತಿಥಿಗಳಾಗಿ ನೀಲಕಂಠರಾವ ಮೂಲಗೆ, ಜಗನ್ನಾಥ ಸೂರ್ಯವಂಶಿ, ನ್ಯಾಯವಾದಿ ರವಿಚಂದ್ರ ಗುತ್ತೇದಾರ್, ಪಂಚ್ ಗ್ಯಾರಂಟಿಗಳ ಉಪಾಧ್ಯಕ್ಷ ವಿಜಯಕುಮಾರ್ ಕಟ್ಟಿಮನಿ, ಕಾಂಗ್ರೆಸ್ ಮುಖಂಡ ಚಾಮ್ನಾಟೇಕರ್, ಹೋರಾಟಗಾರ ಅಭಿಷೇಕ್ ಬಾಲಾಜಿ, ಟ್ರಾಫಿಕ್ ಸಬ್ ಇನ್ಸೆಕ್ಟರ್‌ಗಳಾದ ಭಾರತಿ ಬೈದನಿ ಹಾಗೂ ಶಾಂತಾಬಾಯಿ, ನಿಜಲಿಂಗಪ್ಪ ಕೊರಳಿ, ಅಶೋಕ ನಾಯಕ್ ಬಾರಾ, ಜ್ಯೋತಿರ್ಲಿಂಗ ಅಪ್ಪಾಜಿ, ಶ್ವೇತಾ ಒಂಟಿ, ಎಂ.ಎ. ಸಿದ್ದಿಕಿ, ಜ್ಯೋತಿ ಅಕ್ಷಯ್, ಚಲನಚಿತ್ರ ನಿರ್ಮಾಪಕ ಅಂಬರೀಶ್ ಪಾಟೀಲ್, ಬೆಂಗಳೂರು ಕಲಾವಿದ ಕಾರ್ತಿಕ್ ವೆಂಕಟೇಶ್ ಸೇರಿದಂತೆ ಅನೇಕ ಗಣ್ಯರು ಹಾಗೂ ಕಲಾವಿದರು ಉಪಸ್ಥಿತರಿದ್ದರು.

ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಕಲಾವಿದರು ತಮ್ಮ ಮನಮೋಹಕ ಪ್ರದರ್ಶನಗಳ ಮೂಲಕ ಪ್ರೇಕ್ಷಕರ ಮನಗೆದ್ದರು.

ಈ ಕುರಿತು ಗುಲ್ಬರ್ಗ ಡಾನ್ಸ್ ಸಂಘದ ಅಧ್ಯಕ್ಷ ವೆಂಕಪ್ಪ ಅಕ್ಷಯ್ ಹಾಗೂ ಸೂರಜ್ ಲೋನಾರ್ ಮಾಹಿತಿ ನೀಡಿದ್ದಾರೆ.

# ಮಮಿತಾಬಾಯಿ ಕದ್ರೆಗೆ ಶರಣ ಪ್ರಶಸ್ತಿ

**ಬೀದರ್:** ಜಿಲ್ಲೆಯವರೇ ಆದ ಹುಬ್ಬಳ್ಳಿ ಉಪ ಕಾರಾಗೃಹದ ಮುಖ್ಯ ವೀಕ್ಷಕಿ ಮಮಿತಾಬಾಯಿ ಕದ್ರೆ ಅವರಿಗೆ ಹುಬ್ಬಳ್ಳಿಯ ಸಹನ-ಸಾಧನಾ ಕಲಾ, ಸಂಸ್ಕೃತಿ ಸಂಸ್ಥೆ ವತಿಯಿಂದ ಕೊಡಲಾಗುವ ಪ್ರಸಕ್ತ ಸಾಲಿನ ಶರಣ ಪ್ರಶಸ್ತಿ ಲಭಿಸಿದೆ.ಹುಬ್ಬಳ್ಳಿಯ ಮೂರು ಸಾವಿರ ಮಠದ ಸಭಾ ಭವನದಲ್ಲಿ ನಡೆದ ಸಮಾರಂಭದಲ್ಲಿ ಕದ್ರೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.ಮಮಿತಾಬಾಯಿ ವೃತ್ತಿ ಜತೆಗೆ ಉತ್ತಮ ಕ್ರೀಡಾಪಟು ಕೂಡ ಆಗಿದ್ದಾರೆ. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ. ಪ್ರಶಸ್ತಿ ಲಭಿಸಿರುವುದು ನನಗೆ ಸಂತಸ ಉಂಟು ಮಾಡಿದೆ. ವೃತ್ತಿ ಹಾಗೂ ಕ್ರೀಡಾ ಚಟುವಟಿಕೆಯಲ್ಲಿ ಇನ್ನಷ್ಟು ಉತ್ಸಾಹದಿಂದ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದೆ ಎಂದು ತಿಳಿಸಿದ್ದಾರೆ.



## ಹವಾಮಾನ ಬದಲಾವಣೆ ಪರಿಣಾಮ ತಗ್ಗಿಸಲು ಕ್ರಿಯಾ ಯೋಜನೆ: ಈಶ್ವರ ಖಂಡ್ರೆ



**ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಅಸರ್ ಸೋಷಿಯಲ್ ಇಂಪ್ಯಾಕ್ಟ್ ಅಡ್ವೈಸರ್ ಸಂಸ್ಥೆ ವತಿಯಿಂದ ನಗರದಲ್ಲಿ ಇಂದು ನಡೆದ ಬೆಂಗಳೂರಿನಲ್ಲಿ ತಾಪಮಾನ ವೈಪರೀತ್ಯ ಹಾಗೂ ಅದರ ಪರಿಣಾಮಗಳ ಕುರಿತ ಕಾರ್ಯಾಗಾರದಲ್ಲಿ ಸಚಿವ ಈಶ್ವರ್ ಖಂಡ್ರೆ, ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ನಿರ್ದೇಶಕ ಎಂ.ಎಸ್. ದಿವಾಕರ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ ಮತ್ತಿತರರು ಭಾಗವಹಿಸಿದ್ದರು.**

**ಬೆಂಗಳೂರು, ಏ.28–** ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಲು ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ (ಕೆಎಸ್‌ಎಪಿಸಿಸಿ) ರೂಪಿಸಲಾಗಿದ್ದು, ಇದರ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡಮಿ ಆಯೋಜಿಸಿದ್ದ ವಿತರೀತ ಬಿಸಿ ಮತ್ತು ಬೆಂಗಳೂರಿನ ಮೇಲೆ ಅದರ ಪರಿಣಾಮ ಕುರಿತ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕ್ರಿಯಾ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಾರಿಗೆ ತರಲು ಪರಿಸರ ಇಲಾಖೆ ವ್ಯಾಪ್ತಿಗೆ ಒಳಪಡುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ -ಎಂಪ್ರಿ ಕ್ರಮ ಕೈಗೊಂಡಿದೆ ಎಂದರು.ಜಿಲ್ಲಾ ಪಂಚಾಯತ್ ಕಚೇರಿಗಳ ಸಹಯೋಗದೊಂದಿಗೆ ಕೆಎಸ್‌ಎಪಿಸಿಸಿ ಅನುಷ್ಠಾನ ಮತ್ತು ಅದರ ಪ್ರಗತಿಯ ಕುರಿತು ಜಿಲ್ಲಾ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದೂ ತಿಳಿಸಿದರು.

ಹವಾಮಾನ-ಚೇತರಿಕೆಗೆ ಸಂಬಂಧಿಸಿದಂತೆ ಉತ್ತಮ ರೂಢಿಗಳ ಮಾಹಿತಿಯನ್ನು ಹಂಚಿಕೊಳ್ಳಲು ಏಪ್ರಿಲ್ 2025 ರಲ್ಲಿ ಸಮರ್ಪಿತ ರೇಡಿಯೋ ಕಾರ್ಯಕ್ರಮ "ಹವಮಾನ ಮಿತ್ರ" ಪ್ರಾರಂಭಿಸಲಾಗಿದ್ದು, ಈವರೆಗೆ 24 ಕಾರ್ಯಕ್ರಮಗಳನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಲಾಗಿದೆ. ಈ ಮೂಲಕ ಜನಜಾಗೃತಿ ಮೂಡಿಸುವ ಪ್ರಯತ್ನಗಳು ನಡೆದಿವೆ ಎಂದೂ ಈಶ್ವರ ಖಂಡ್ರೆ ತಿಳಿಸಿದರು.

# ಬಿಜೆಪಿ ನಾಯಕರ ಹೇಳಿಕೆಗೆ ಜಗದೇವ ಗುತ್ತೇದಾರ ಖಂಡನೆ



**ಕಲಬುರಗಿ,ಏ. 28–** ಎಐಸಿಸಿ ಅಧ್ಯಕ್ಷರು ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯ ನಿವೃತ್ತಿ ಹೊಂದಬೇಕು ಎಂದು ಬಿಜೆಪಿ ಮುಖಂಡರಾದ ಆರ್.ಅಶೋಕ ಹಾಗೂ ಚಲವಾದಿ ನಾರಾಯಣಸ್ವಾಮಿ ಮತ್ತು ಕಲಬುರಗಿ ಜಿಲ್ಲೆಯ ಕೆಲವು ಬಿಜೆಪಿ ನಾಯಕರ ಇಂತಹ ಅಸಮಂಜಸ ಹೇಳಿಕೆಯನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ ಕಾಳಗಿ ರವರು ಬಲವಾಗಿ ಖಂಡಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರು, ಕರ್ನಾಟಕ ರಾಜ್ಯ ಹಾಗೂ ರಾಷ್ಟ್ರ ಕಂಡಂತಹ ಒಬ್ಬ ಹಿರಿಯ ಹಾಗೂ ಅನುಭವಿಯ ಅಪರೂಪದ ರಾಜಕಾರಣಿ.

ಇಂತಹ ಹಿರಿಯ ಅನುಭವಿ ರಾಜಕಾರಣಿಯ ಕುರಿತು ಮಾತನಾಡುವಾಗ ಬಿಜೆಪಿ ಮುಖಂಡರು ಮೊದಲು ಸರಿಯಾಗಿ ತಿಳಿದುಕೊಂಡು ಅರಿತು ಮಾತನಾಡಲಿ ಎಂದು ಎಚ್ಚರಿಸಿದ್ದಾರೆ.

ಚುನಾವಣೆಯಲ್ಲಿ ಮತದಾರರ ಕೃಪಾರ್ಶಿವಾದದಿಂದ ಸುಮಾರು 11 ಬಾರಿ ಜಯಶಾಲಿಯಾಗಿ ವಿಧಾನಸಭೆ, ಲೋಕಸಭೆಗೆ ಆಯ್ಕೆಗೊಂಡಿರುವ ಮಲ್ಲಿಕಾರ್ಜುನ ಖರ್ಗೆ ಯವರು ಕರ್ನಾಟಕ ರಾಜ್ಯಕ್ಕೆ ಮೇಲಾಗಿ ಕಲ್ಯಾಣ ಕರ್ನಾಟಕಕ್ಕೆ 371 (ಜೆ) ಕಲಂ ಜಾರಿಗೆ ತಂದು ರಾಜಕೀಯವಾಗಿ, ಸರಕಾರಿ ಉದ್ಯೋಗದಲ್ಲಿ, ಸೇವಾ ಮುಂಬಡ್ತಿಯಲ್ಲಿ, ಶಿಕ್ಷಣದಲ್ಲಿ, ಮೂಲಭೂತ ಅಭಿವೃದ್ಧಿಯಲ್ಲಿ, ಕಾಮಗಾರಿಗಳ ವಿಶೇಷ ಅನುದಾನದಲ್ಲಿ ಹಾಗೂ ಇನ್ನಿತರವಾಗಿ ಈ ಹಿಂದುಳಿದ ಭಾಗಕ್ಕೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಈ ಎಲ್ಲಾ ಸದುಪಯೋಗಗಳನ್ನು ಪಡೆದುಕೊಂಡು ರಾಜಕೀಯವಾಗಿ ಇವರು ನಿವೃತ್ತಿ ನಿಡಬೇಕು ಎಂದು ಹೇಳುವದು ಯಾವ ನ್ಯಾಯ ಎಂದು ಅವರು ಪ್ರಶ್ನಿಸಿದ್ದಾರೆ.

ಈ ಭಾಗದ ಮತದಾರ ಪ್ರಭುಗಳು ಅವರನ್ನು ಕೈ ಬಿಡದೇ ಸತತವಾಗಿ ಚುನಾವಣೆಯಲ್ಲಿ ಗೆಲ್ಲಿಸುತ್ತಾ ಬಂದಿರುತ್ತಾರೆ. ಇದನ್ನು ಸಹಿಸದೇ ಖರ್ಗೆಜೀಯವರ ಮುಂದೆ ಜನಿಸಿ ಬೆಳೆದ ಬಿಜೆಪಿಯ ಕೆಲವು ಮುಖಂಡರು ಖರ್ಗೆಜೀಯವರ ಕುರಿತು ಹಗುರವಾಗಿ ಮಾತನಾಡುವದು ಸರಿಯಲ್ಲ. ಇಂತಹ ಹಿರಿಯ ಅನುಭವಿ ರಾಜಕಾರಣಿಯು ಇನ್ನೂ ಹೆಚ್ಚು ವರ್ಷಗಳ ಕಾಲ ಅಧಿಕಾರದಲ್ಲಿದ್ದು ರಾಷ್ಟ್ರ ಹಾಗೂ ಕರ್ನಾಟಕ ರಾಜ್ಯದ ಜನರ ಆಗುಹೋಗುಗಳಿಗೆ ಮತ್ತು ಈ ಭಾಗದ ಅಭಿವೃದ್ಧಿಗೆ ಸೇವೆ ಸಲ್ಲಿಸಲಿ ಎಂದು ಹೇಳುತ್ತಾ ಬಿಜೆಪಿ ಯವರ ಇಂತಹ ಕೀಳು ಮಟ್ಟದ ಹೇಳಿಕೆಯನ್ನು ಅವರು ಬಲವಾಗಿ ಖಂಡಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

## ಬಂಗಾಳದಲ್ಲಿ ಇಂದು 2ನೇ ಹಂತದ ಮತದಾನ: ಬಿಗಿ ಭದ್ರತೆ

**ಕೋಲ್ಕತ್ತಾ, ಏ,28–** ಪಶ್ಚಿಮ ಬಂಗಾಳ ವಿಧಾನಸಭೆಯ ಎರಡನೇ ಹಾಗು ಅಂತಿಮ ಹಂತದಲ್ಲಿ 142 ಕ್ಷೇತ್ರಗಳಿಗೆ ನಾಳೆ ಬಿಗಿ ಭದ್ರತೆಯಲ್ಲಿ ಮತದಾನ ನಡೆಯಲಿದ್ದು ದಕ್ಷಿಣ ಕೋಲ್ಕತ್ತಾದ ಭೋವಾನಿಪುರ್ ರಾಜ್ಯದ ಹೈವೋಲ್ಟೋಜ್ ಕ್ಷೇತ್ರವಾಗಿ ಮಾರ್ಪಟ್ಟಿದೆ.ಈ ಕ್ಷೇತ್ರದಿಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಒಂದು ಕಾಲದ ಅವರ ಆಪ್ತ ಮತ್ತು ಬಿಜೆಪಿಯ ವಿರೋಧ ಪಕ್ಷದ ನಾಯಕ ಸುವೇಂಧು ಅಧಿಕಾರಿ ಪರಸ್ಪರ ಕಣಕ್ಕಳಿದಿದ್ದು ತೀವ್ರ ಪೈಪೋಟಿ ಮತ್ತು ಜಿದ್ದಾ ಜಿದ್ದಿಗೆ ಕಾರಣವಾಗಿದೆ.




ತೃಣಮೂಲ ಕಾಂಗ್ರೆಸ್‌ಗೆ, ಭೋವಾನಿಪುರವನ್ನು ಉಳಿಸಿಕೊಳ್ಳುವುದು ಜೊತೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕೋಟೆಯನ್ನು ಭದ್ರಪಡಿಸಿಕೊಳ್ಳುವುದು ಸವಾಲಾಗಿದ್ದು ಇದಕ್ಕಾಗಿ ಟಿಎಂಸಿ ಪಕ್ಷದ ಹಲವು ನಾಯಕರು ಬಿರುಸಿವ ಪ್ರಚಾರ ನಡೆಸಿದ ಜನ ಮನ ಗೆಲ್ಲಲು ಕಸರತ್ತು ನಡೆಸಿದ್ದಾರೆ, ಅದಕ್ಕೆ ಮೇ.4 ರಂದು ಉತ್ತರ ದೊರೆಯಲಿದೆ.ಈ ಕ್ಷೇತ್ರ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಪ್ರತಿಪಕ್ಷದ ನಾಯಕ ಸುವೇಂಧು ಅಧಿಕಾರಿ ನಡುವಿನ ತೀವ್ರ ಪೈಪೋಟಿಯ ಕ್ಷೇತ್ರವಾಗಿದೆ, ಜೊತೆಗೆ ರಾಜಕೀಯ ಗುರುತು, ಸಿದ್ಧಾಂತ ಮತ್ತು ಆಡಳಿತದ ದೊಡ್ಡ ವಿಷಯಗಳ ಕುರಿತು ಸಂಘರ್ಷಕ್ಕೆ ಎಡೆ ಮಾಡಿದೆ.

ಕೇಸರಿ ಪಕ್ಷಕ್ಕೆ ಪಶ್ಚಿಮ ಬಂಗಾಳವನ್ನು ಗೆಲ್ಲಲು ವಿಫಲವಾದರೂ ಸಹ, ಮಮತಾ ಬ್ಯಾನರ್ಜಿ ಅವರ ಅವರ ಕೋಟೆಯನ್ನು ಬಿಜೆಪಿ ಭೇದಿಸುವುದು ಮತ್ತು ಈ ಮೂಲಕ ತೃಣಮೂಲ ಕಾಂಗ್ರೆಸ್‌ಗೆ ಹೊಡೆತ ನೀಡಲು ಇನ್ನಿಲ್ಲದ ಕಸರತ್ತು ನಡೆಸಿದೆ. ಈ ಕ್ಷೇತ್ರದಲ್ಲಿ ಬಂಗಾಳಿ ಭದ್ರಲೋಕ ಕುಟುಂಬಗಳು, ಮಾರ್ವಾರಿ ಮತ್ತು ಗುಜರಾತಿ ವ್ಯಾಪಾರ ಕುಟುಂಬಗಳು, ಸಿಖ್ ಮತ್ತು ಜೈನ ನಿವಾಸಿಗಳು, ಬಿಹಾರ ಮತ್ತು ಒಡಿಶಾದ ವಸಾಹತುಗಾರರು ಮತ್ತು ಗಣನೀಯ ಮುಸ್ಲಿಂ ಮತದಾರರು ಸೇರಿರುವ ವೈವಿಧ್ಯಮಯ ಮತದಾರರು ಇರುವ ಕ್ಷೇತ್ರವಾಗಿದೆ, ಜೊತೆಗೆ ರಾಜಕೀಯ ಪೈಪೋಟಿಗೂ ಕಾರಣವಾಗಿದೆ ಎಂದು ತೃಣಮೂಲದ 70ನೇ ವಾರ್ಡ್ ಕೌನ್ಸಿಲರ್ ಆಶಿಮ್ ಬೋಸ್ ಹೇಳಿದ್ದಾರೆ. ಮುಖ್ಯಮಂತ್ರಿ ಮಮತಾ 2021 ರ ಉಪಚುನಾವಣೆಯಲ್ಲಿ ದಾಖಲೆಯ 59,000 ಮತಗಳ ಅಂತರದಿಂದ ಗೆದ್ದರು. ಆದರೆ 2024 ರ ಲೋಕಸಭಾ ಚುನಾವಣೆಯಲ್ಲಿ, ವಿಧಾನಸಭಾ ಕ್ಷೇತ್ರದಲ್ಲಿ ತೃಣಮೂಲದ ಮುನ್ನಡೆ 8,000 ಕ್ಕಿಂತ ಸ್ವಲ್ಪ ಕಡಿಮೆಯಾಯಿತು. ಎಂಟು ವಾರ್ಡ್‌ಗಳಲ್ಲಿ ಐದರಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದೆ, ಇದು ತೃಣಮೂಲ ಕಾಂಗ್ರೆಸ್ ಭಾವನಾತ್ಮಕ ಬಂಡವಾಳವನ್ನು ಉಳಿಸಿಕೊಂಡರೆ, ಕೇಸರಿ ಪಕ್ಷ ತನ್ನ ಪ್ರಬಾವ ವಿಸ್ತರಿಸುತ್ತಿರುವುದಕ್ಕೆ ಸಾಕ್ಷಿಯಾಗಿತ್ತು.

## ಬುದ್ಧ, ಬಸವ, ಅಂಬೇಡ್ಕರ್ ಜಯಂತಿ, ಪ್ರಶಸ್ತಿ ಪ್ರದಾನ 30ಕ್ಕೆ



**ಬೀದರ್: ಏ.28:**ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಣೆ ಹಾಗೂ ಜಿಲ್ಲಾಮಟ್ಟದ ಬಸವ ಕಾಯಕ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಏ. 30 ರಂದು ಸಂಜೆ 5ಕ್ಕೆ ನಗರದ ಕೇಂದ್ರ ಬಸ್ ನಿಲ್ದಾಣ ಸಮೀಪದ ಶ್ರೀ ಸ್ವಾಮಿ ನರೇಂದ್ರ ಪದವಿಪೂರ್ವ ಕಾಲೇಜು ಮುಂಭಾಗದ ಭವಾನಿ ಮಂದಿರದ ಫಂಕ್ಷನ್ ಹಾಲ್‌ನಲ್ಲಿ ನಡೆಯಲಿದೆ.
ಬಿಡಿಎ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಉದ್ಘಾಟಿಸುವರು. ವಿಧಾನ ಪರಿಷತ್ ಮಾಜಿ ಸದಸ್ಯ ಶರಣಪ್ಪ ಮಟ್ಟೂರ ಪ್ರಶಸ್ತಿ ಪ್ರದಾನ ಮಾಡುವರು. ಶ್ರೀ ಸ್ವಾಮಿ ನರೇಂದ್ರ ಪದವಿಪೂರ್ವ ಕಾಲೇಜು ಅಧ್ಯಕ್ಷ ಡಾ. ಚಂದ್ರಕಾಂತ ಪಾಟೀಲ ಅಧ್ಯಕ್ಷತೆ ವಹಿಸುವರು.
ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪಾಂಡುರಂಗ ಬೆಲ್ದಾರ್ ಮುಖ್ಯ ಅತಿಥಿಯಾಗಿ, ಕರ್ನಾಟಕ ರಾಜ್ಯ ಅನುದಾನಿತ ಪದವಿಪೂರ್ವ ಕಾಲೇಜು ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಡಾ. ವಿಜಯಕುಮಾರ ಕೆ. ಪಾಟೀಲ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪರಮೇಶ್ವರ ಬಿರಾದಾರ, ಕರ್ನಾಟಕ ರಾಜ್ಯ ಶಿಕ್ಷಕರ ವಿಕಾಸ ಪರಿಷತ್ ರಾಜ್ಯ ಕಾರ್ಯದರ್ಶಿ ಸಂಜೀವಕುಮಾರ ಸ್ವಾಮಿ, ರಾಮಸ್ವಾಮಿ ಪೇರಿಯಾರ್ ಪ್ರೌಢಶಾಲೆ ಮುಖ್ಯಶಿಕ್ಷಕ ಸಿದ್ರಾಮ ನಿಜಾಂಪುರ, ಶ್ರೀ ಸ್ವಾಮಿ ನರೇಂದ್ರ ಪದವಿಪೂರ್ವ ಕಾಲೇಜು ಕಾರ್ಯದರ್ಶಿ ಅಭಿಷೇಕ ಪಾಟೀಲ, ನಿರ್ದೇಶಕಿ ಕಲ್ಪನಾ ಮಠಪತಿ, ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ಕಲಾಲ್ ದೇವಿಪ್ರಸಾದ್ ಅತಿಥಿಗಳಾಗಿ ಪಾಲ್ಗೊಳ್ಳುವರು.
ಯರನಳ್ಳಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಶ್ಯಾಮಸುಂದರ್ ಖಾನಾಪುರ ವಿಶೇಷ ಉಪನ್ಯಾಸ ನೀಡುವರು. ಪ್ರಾಚಾರ್ಯೆ ಮಂಗಲಾ ಎನ್.ಎಂ. ಪ್ರಾಸ್ತಾವಿಕವಾಗಿ ಮಾತನಾಡುವರು ಎಂದು ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪಾಂಡುರಂಗ ಬೆಲ್ದಾರ್ ತಿಳಿಸಿದ್ದಾರೆ.
ಶ್ರೀ ಸ್ವಾಮಿ ನರೇಂದ್ರ ಪದವಿಪೂರ್ವ ಕಾಲೇಜು, ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕ ಹಾಗೂ ಕರ್ನಾಟಕ ರಾಜ್ಯ ಅನುದಾನಿತ ಪದವಿಪೂರ್ವ ಕಾಲೇಜು ನೌಕರರ ಸಂಘದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ದಿನಪತ್ರಿಕೆ ಓದು ಕಡ್ಡಾಯ ನಿರ್ಧಾರ: ಸ್ವಾಗತ



**ಕಲಬುರಗಿ:ಏ.28:**ರಾಜ್ಯದ ಶಾಲಾ ಮಕ್ಕಳಲ್ಲಿ ಸಾಮಾನ್ಯ ಜ್ಞಾನ ಹೆಚ್ಚಿಸಲು ಮತ್ತು ಕನ್ನಡ ಭಾಷಾ ಕೌಶಲವನ್ನು ಉತ್ತಮಪಡಿಸಲು ಶಿಕ್ಷಣ ಇಲಾಖೆಯು ಮಹತ್ವದ ನಿರ್ಧಾರವೊಂದನ್ನು ಕೈಗೊಂಡಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪ್ರತಿದಿನ ಬೆಳಗಿನ ಪ್ರಾರ್ಥನೆಯ ನಂತರ 10 ರಿಂದ 15 ನಿಮಿಷಗಳ ಕಾಲ ಕಡ್ಡಾಯವಾಗಿ ಕನ್ನಡ ದಿನಪತ್ರಿಕೆ ಓದಿಸುವ ಅಭ್ಯಾಸವನ್ನು ಜಾರಿಗೆ ತರಲು ಆದೇಶಿಸಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸುವುದಾಗಿ ಆಳಂದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹಣಮಂತ ಶೇರಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯಿಂದ ಹೊರಡಿಸಲಾದ ಈ ಸುತ್ತೋಲೆಯು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ (ಖಾಸಗಿ) ಶಾಲೆಗಳಿಗೆ ಈ ನಿಯಮ ಅನ್ವಯವಾಗಲಿದೆ. ಪ್ರತಿದಿನ ಶಾಲಾ ಪ್ರಾರ್ಥನೆಯ ನಂತರದ ಮೊದಲ 10 ರಿಂದ 15 ನಿಮಿಷಗಳನ್ನು ಪತ್ರಿಕೆ ಓದಲು ಮೀಸಲಿಡಬೇಕು. ಡಿಜಿಟಲ್ ಯುಗದಲ್ಲಿ ಮಕ್ಕಳು ಮೊಬೈಲ್ ಮತ್ತು ಗ್ಯಾಜೆಟ್‌ಗಳಿಗೆ ಹೆಚ್ಚು ಅಂಟಿಕೊಳ್ಳುತ್ತಿರುವುದರಿಂದ ಅವರಲ್ಲಿ ಏಕಾಗ್ರತೆ ಮತ್ತು ದೈಹಿಕ ಚಟುವಟಿಕೆಗಳ ಕೊರತೆ ಕಂಡುಬರುತ್ತಿದೆ. ಇದನ್ನು ಹೋಗಲಾಡಿಸಿ, ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ, ಭಾಷಾ ಶೈಲಿ, ಬರವಣಿಗೆ ಕೌಶಲ ಮತ್ತು ಪ್ರಚಲಿತ ವಿದ್ಯಮಾನಗಳ ಅರಿವು ಮೂಡಿಸುವಲ್ಲಿ ದಿನಪತ್ರಿಕೆ ಓದುವುದು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಶಿಫಾರಸಿನ ಮೇರೆಗೆ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪತ್ರಿಕಾ ಓದು ಪೂರಕವಾಗಲಿದೆ ಎಂದು ಆಯೋಗವು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯು ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಎಲ್ಲಾ ಉಪನಿರ್ದೇಶಕರಿಗೆ (DDPI) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (BEO) ಸೂಚನೆ ನೀಡಿದೆ. ಈ ಹೊಸ ಕ್ರಮದಿಂದಾಗಿ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿಯೇ ನಾಡು-ನುಡಿ ಹಾಗೂ ಜಗತ್ತಿನ ವಿದ್ಯಮಾನಗಳ ಬಗ್ಗೆ ಆಳವಾದ ಜ್ಞಾನ ಪಡೆಯಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರರವೇ ಪ್ರತಿ ಶಾಲೆಗಳಿಗೆ ಕನಿಷ್ಠ 50 ದಿನಪತ್ರಿಕೆಗಳನ್ನು ಪೂರೈಸಲಿ ಇದರಿಂದ ಆರ್ಥಿಕ ನಷ್ಟ ಅನುಭವಿಸುತ್ತಿರುವ ಪತ್ರಿಕೆಗಳಿಗೂ ಸಹಾಯ ಮಾಡಿದಂತಾಗುತ್ತದೆ ಎಂದು ಒತ್ತಾಯಿಸಿದ್ದಾರೆ.

## ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನೋತ್ಸವ




**ಪಿರಿಯಾಪಟ್ಟಣ:ಏ.28:–** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನೋತ್ಸವವನ್ನು ತಾಲೂಕು ಆಡಳಿತದ ಜೊತೆಗೆ ಬಲಗೈ ಸಮುದಾಯಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಈರಯ್ಯ ತಿಳಿಸಿದರು.

ಪಟ್ಟಣದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಕಾರ್ಯಕ್ರಮಕ್ಕೆ ಬಹುಜನ ಜ್ಞಾನಪ್ರಕಾಶ ಸ್ವಾಮೀಜಿ, ಬೋಧಿ ರತ್ನ ಬಂತೇಜಿರವರು, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಕೆ. ವೆಂಕಟೇಶ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಹಚ್. ಸಿ ಮಾದೇವಪ್ಪ, ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಸಚಿವರಾದ ಎಂ. ಪ್ರಿಯಾಂಕ ಖರ್ಗೆ, ವಿಧಾನಪರಿಷತ್ ಸದಸ್ಯರಾದ ಕೆ. ಶಿವಕುಮಾರ್, ಅರಗು ಮತ್ತು ಬಣ್ಣದ ಕಾರ್ಖಾನೆ ನಿಗಮ ಮಂಡಳಿ ಅಧ್ಯಕ್ಷರಾದ ಹಚ್. ಡಿ ಗಣೇಶ್, ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ನಿತಿನ್ ವೆಂಕಟೇಶ್, ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ , ಈ ಕಾರ್ಯಕ್ರಮಕ್ಕೆ ತಾಲೂಕಿನ ಬಲಗೈ ಸಮುದಾಯದ ಹಳ್ಳಿಯಲ್ಲಿರುವಂತಹ ಎಲ್ಲಾ ಮಹಿಳಾ ಸಂಘದವರು, ಎಲ್ಲಾ ಹಿರಿಯರು ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಭಿಮಾನಿಗಳು ಏಪ್ರಿಲ್ 29 ನೇ ತಾರೀಕು ನಡೆಯಲಿರುವ ಅಂಬೇಡ್ಕರ್ ಅವರ 135 ನೇ ಜಯಂತೋತ್ಸವದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.
ನಂತರ ಐಲಾಪುರ ರಾಮು ಮಾತನಾಡಿ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶದಲ್ಲಿರುವ ನಮ್ಮ ಸಮಾಜದ ಬಂಧುಗಳಲ್ಲಿ ಮನವಿ

ಏಪ್ರಿಲ್ 29 ನೇ ತಾರೀಕು ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ಎಲ್ಲರೂ ಪಟ್ಟಣದ ಎಪಿಎಂಸಿ ಆವರಣದ ಬಳಿ ಸೇರಬೇಕು ಆನಂತರ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ವಿವಿಧ ಕಲಾತಂಡಗಳ ಜೊತೆಯಲ್ಲಿ ಭವ್ಯ ಮೆರವಣಿಗೆಯ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಲಾಗುವುದು ಈ ಸಂದರ್ಭದಲ್ಲಿ ಎಲ್ಲರೂ ಅತ್ಯಂತ ಸಿಸ್ತುಬದ್ಧವಾಗಿ ಬಂದು ವೇದಿಕೆ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸ ಬೇಕು , ಈ ಕಾರ್ಯಕ್ರಮದಲ್ಲಿ ನಮ್ಮ ಸ್ವಾಮೀಜಿಯವರ ಸಮ್ಮುಖದಲ್ಲಿ ಮಾನ್ಯ ರಾಜ್ಯ ಸರ್ಕಾರದ ನಾಯಕರ ಮುಂದೆ ನಮ್ಮ ಹಲವು ಬೇಡಿಕೆಗಳನ್ನ ಮನವಿ ಮಾಡಿಕೊಳ್ಳಬೇಕಾಗಿದೆ ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮುದಾಯದ ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನಂತರ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಜೀವನ, ವಿಚಾರಧಾರೆ ಮತ್ತು ಸಂವಿಧಾನದ ಮಹತ್ವದ ಕುರಿತು ತಜ್ಞರಿಂದ ವಿಶೇಷ ಉಪನ್ಯಾಸ ವಿದ್ದು ಅಂಬೇಡ್ಕರ್ ಅವರ ವಿಚಾರವಾದಗಳನ್ನು ತಿಳಿದು ಜೀವನದಲ್ಲಿ ಅನುಸರಿಸಿಕೊಳ್ಳಬೇಕೆಂದು ತಿಳಿಸಿದರು.ನಂತರ ಮಾತನಾಡಿದ ಧನರಾಜ್ ಈಗಾಗಲೇ ಎಲ್ಲ ಪದಾಧಿಕಾರಿಗಳು ವ್ಯಾಲೆಂಟರಿಯಾಗಿ ಪ್ರತಿ ಹಳ್ಳಿಗಳಿಗೆ ಭೇಟಿ ನೀಡಿ ಕಾರ್ಯಕ್ರಮದ ರೂಪರೇಷಗಳನ್ನು ತಿಳಿಸಿ ಎಲ್ಲರನ್ನೂ ಆಹ್ವಾನಿಸಿ ದಾರೆ ಬಾಬಾಸಾಹೇಬರ ವಿಚಾರಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ, ಅವು ಇಡೀ ಮಾನವಕುಲಕ್ಕೆ ದಾರಿದೀಪ. ಈ ಹಿನ್ನೆಲೆಯಲ್ಲಿ ಜಾತಿ-ಮತ ಭೇದ ಮರೆತು ತಾಲೂಕಿನ ಎಲ್ಲಾ ಅಂಬೇಡ್ಕರ್ ಅಭಿಮಾನಿಗಳು ಈ ಜಯಂತಿ ಉತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು, ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿ. ತಮ್ಮಣ್ಣಯ್ಯ, ದೊಡ್ಡ ಹರವೆ ರಾಜಯ್ಯ, ಪಿ. ಮಹದೇವ್, ಶೇಖರ್, ಎ. ಎಸ್ ಸೋಮಶೇಖರ್, ಪಿ.ಪಿ ಮಹದೇವ್, ಕಾಂತರಾಜ್, ಗಿರೀಶ್ ಭೀಮ್ ಆರ್ಮಿ, ರಾಜು ಟಿ .ಎಸ್, ರಾಜೇಶ್ ಮೇಲೂರು, ಮಹದೇವ್ ಆರ್. ಡಿ, ಜಗದೀಶ್, ದೇವೇಂದ್ರ, ಶಿವರಾಜ್ ಸೆರಿದಂತೆ ಸಮಾಜದ ಹಲವು ಮುಖಂಡರು ಭಾಗವಹಿಸಿದ್ದರು.

## ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ




**ಕೆ.ಆರ್.ಪೇಟೆ.ಏ.28:** ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡ ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಮೇ.20ರ ಬುಧವಾರ ಪಟ್ಟಣದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದ್ದು ತಾಲೂಕಿನ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ನೋಂದಾಯಿಸಿಕೊಳ್ಳಬೇಕು ಎಂದು ಶ್ರೀ ಮಲ್ಲಿಕಾರ್ಜುನ ಚಾರಿಟೇಬಲ್ ಟ್ರಸ್ಟಿನ ಟ್ರಸ್ಟಿ ಗಂಜಿಗೆರೆ ಮಹೇಶ್ ತಿಳಿಸಿದರು.


ಪಟ್ಟಣದ ಜಯನಗರ ಬಡಾವಣೆಯಲ್ಲಿರುವ ಟ್ರಸ್ಟ್ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು ಕಾರ್ಯಕ್ರಮದ ವಿವರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.
ದಿನಾಂಕ: 20-05-2026 ರ ಬುಧವಾರ ಬೆಳಿಗ್ಗೆ 11.ಗಂಟೆಗೆ ಟ್ರಸ್ಟ್‌ನ ವತಿಯಿಂದ ಪ್ರತಿಭಾ ಪುರಸ್ಕಾರ ನಡೆಯಲಿದೆ. 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ ಸ್ಟೇಟ್ ಸಿಲಬಸ್ (ರಾಜ್ಯ ಪಠ್ಯಕ್ರಮ) ಪರೀಕ್ಷೆಯಲ್ಲಿ ಶೇ.95% ಅಂಕಗಳು, ಎಸ್.ಎಸ್.ಎಲ್.ಸಿ ಸಿಬಿಎಸ್ ಸಿ (ಕೇಂದ್ರೀಯ ಪಠ್ಯಕ್ರಮ) ಪರೀಕ್ಷೆಯಲ್ಲಿ ಶೇ.85% ಅಂಕಗಳು ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಐಸಿಐಸಿ ಶೇ.85% ರಷ್ಟು ಅಂಕಗಳನ್ನು ಪಡೆದಿರುವ ಹಾಗೂ 2025-26 ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ (ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗ) ಶೇ.90% ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು.

ತಾಲ್ಲೂಕಿನ ಸರ್ಕಾರಿ ಹಾಗೂ ಅನುದಾನಿತ ಪ್ರೌಢ ಶಾಲೆಗಳಲ್ಲಿ ಮತ್ತು ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜಿನ ಕಾಲೇಜು ಹಂತದಲ್ಲಿ ಅತೀ ಹೆಚ್ಚು ಅಂಕ ಪಡೆದ ತಲಾ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಪ್ರತಿಭಾ ಪುರಸ್ಕಾರ ಸಮಾರಂಭದ ದಿವ್ಯಸಾನಿಧ್ಯವನ್ನು ತುಮಕೂರಿನ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀಶ್ರೀಶ್ರೀ ಸಿದ್ಧಲಿಂಗ ಸ್ವಾಮೀಜಿ ರವರು ಹಾಗೂ ವಿವಿಧ ಮಠಗಳ ಸ್ವಾಮೀಜಿರವರು ಹಾಗೂ ಗಣ್ಯರು ಭಾಗವಹಿಸುತ್ತಾರೆ. ಇಂದಿನಿಂದ ಅರ್ಜಿ ಸ್ವೀಕಾರ ಕಾರ್ಯವನ್ನು ಆರಂಭಿಸಿದ್ದು ಮೇ.16 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಟ್ರಸ್ಟ್ ನ ಕಛೇರಿಯಲ್ಲಿ ಅರ್ಜಿ ನಮೂನೆ ಪಡೆದುಕೊಳ್ಳುವುದು. ಅರ್ಜಿಯೊಂದಿಗೆ ದೃಢೀಕೃತ ಅಂಕ ಪಟ್ಟಿ, ಆಧಾರ್ ಕಾರ್ಡ್ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ 3 ಪೊಟೊ ಸಲ್ಲಿಸಬೇಕು ಎಂದು ಮಹೇಶ್ ತಿಳಿಸಿದರು. ಹೆಚ್ಚಿನ ವಿವರಗಳಿಗೆ ಟ್ರಸ್ಟ್ ನ ದೂರವಾಣಿ ಸಂಖ್ಯೆ 08230-200235 ಅಥವಾ 9731279740 ಸಂಪಕಿಸಲು ಕೋರಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸುಜೇಂದ್ರ ಕುಮಾರ್, ಜಿಲ್ಲಾ ಜನಜಾಗೃತಿ ಉಪಾಧ್ಯಕ್ಷೆ ನಳಿನಿ, ಉದಯ ರವಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಸೋಮಶೇಖರ್, ಕಸಾಪ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಮಾಜಿ ಅಧ್ಯಕ್ಷರುಗಳಾದ ಎಂ.ಕೆ.ಹರಿಚರಣತಿಲಕ್. ಕೆ.ಆರ್.ನೀಲಕಂಠ, ಕನ್ನಡ ಪಂಡಿತ ಚಾ.ಶಿ ಜಯಕುಮಾರ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ಟಿ.ವೈ.ಆನಂದ್, ಶಿಕ್ಷಕ ಸಣ್ಣೇಗೌಡ, ಮಾಕವಳ್ಳಿ ಸುಮಿತ್ ಉಪಸ್ಥಿತರಿದ್ದರು.

## ಮೂರು ಆಕಳು ಕಳವು




**ಕಲಬುರಗಿ,ಏ.27–**ಮನೆಯ ಪತ್ರಾಸ್ ಶೆಡ್ ಹತ್ತಿರ ಕಟ್ಟಿದ್ದ ಮೂರು ಆಕಳು ಕಳವಾಗಿರುವ ಘಟನೆ ಬೇಲೂರ (ಜೆ) ಹತ್ತಿರ ನಡೆದಿದೆ.
ಹುಸೇನ್ ಭಾಷಾ ಮೈಹಿಬೂಬಸಾಬ್ ಅತ್ತಾರ ಎಂಬುವವರ 90 ಸಾವಿರ ರೂ.ಮೌಲ್ಯದ 3 ಆಕಳು ಕಳವಾಗಿದ್ದು, ಅವರು ಈ ಸಂಬಂಧ ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.
ಹುಸೇನ್ ಭಾಷಾ ಅವರು ಇಟ್ಟಂಗಿ ಬಟ್ಟಿಯಲ್ಲಿ ಕೂಲಿ ಕೆಲಸ ಮಾಡುತ್ತ ಜೊತೆಗೆ ಹೈನುಗಾರಿಕೆಗಾಗಿ 3 ಆಕಳು ಸಾಕಿದ್ದರು. ನಿತ್ಯ ಆಕಳುಗಳನ್ನು ಮನೆಯ ಹೊರಗಡೆ ಕಟ್ಟುತ್ತಿದ್ದರು. ಏ.24 ರಂದು ರಾತ್ರಿ ಮಳೆಗಾಳಿ ಬರುತ್ತಿದ್ದುದ್ದರಿಂದ ಮನೆಯ ಪಕ್ಕದಲ್ಲಿರುವ ಪತ್ರಾಸ್ ಶೆಡ್‌ನಲ್ಲಿ ಆಕಳುಗಳನ್ನು ಕಟ್ಟಿದ್ದರು. ರಾತ್ರಿ ವೇಳೆ ಕಳ್ಳರು ಮೂರು ಆಕಳುಗಳನ್ನು ಕಳವು ಮಾಡಿಕೊಂಡು ಹೋಗಿದ್ದಾರೆ. ಈ ಬಗ್ಗೆ ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE